# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

॥धर्मो रक्षति रक्षितः॥

Vol. XXXI No. 8 JUNE 2022 Pages 16 Rs. 2/-





PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.

**"Havyaka Sandesha"** is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat

***Editorial Committee*** Smt. Shashikala Hegde
Smt. Tanuja Hegde
Shri Umesh Hegde
Smt. Shailaja Hegde

***Publisher*** : Narayan Akadas R.
Hon. Gen. Secretary

***Printed at*** : M/s. Navin Printers
Mumbai - 400 016.
✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2019-2020**

| | | |
|---|---|---|
| ***President*** | : | Shivkumar P. Bhagwat |
| ***Vice - President*** | : | Sanjay Bhat |
| ***Hon. Gen. Secretary*** | : | Narayan Akadas |
| ***Hon. Jt. Secretary*** | : | Umesh Hegde |
| ***Hon. Treasurer*** | : | A. G. Bhat |

***Elected Members :***

| | |
|---|---|
| Smt. Tanuja Hegde | A. K. Bhat |
| Smt. Shashikala Hegde | R. N. Kameshwar |
| N. K. Hegde | Ramesh Vaidya |
| Gautam Upadhya | Chidanand Bhagwat |

***Co-opted Members :***
Umesh Maskeri, Shailaja Hegde

***ಸಂಪಾದಕೀಯ***

# ಪಾಲಿಗೆ ಬಂದಿದ್ದು



ಎಷ್ಟು ಹಾರಿದರೂ ಕೈಗೆಟುಕದ ದ್ರಾಕ್ಷಿ ಹಣ್ಣನ್ನು ಹುಳಿ ಎಂದು ತೊರೆದು ಹೋದ ನರಿಯ ಕತೆಯು ಪ್ರತಿ ಬಾರಿಯೂ ಚೋದ್ಯವಾಗಿಯೇ ತೋರುತ್ತದೆ.

ನರಿಯೆಂದೊಡನೆ ನೆನಪಾಗುವುದು ಅದರ ಬುದ್ದಿವಂತಿಕೆಯ ಜೊತೆಗೆ ಬೆರೆತ ಹೊಂಚುಗಾರಿಕೆ. ಕೆಲವೊಮ್ಮೆ ಮನುಷ್ಯರ ಸ್ವಭಾವವನ್ನು ನರಿಗೆ ಹೋಲಿಸುವುದುಂಟು. ಪ್ರಾಣಿ ಜಗತ್ತಿನಲ್ಲಿ ಅದು ಶಕ್ತಿಶಾಲಿಯಲ್ಲವಾದರೂ, ತನ್ನ ಯುಕ್ತಿಯಿಂದಲೇ ಕಾರ್ಯ ಸಿದ್ಧಿಸಿಕೊಳ್ಳುವ ಸಾಮರ್ಥ್ಯವುಳ್ಳದ್ದು. ಕಪಟ ಸ್ವಭಾವದವರಿಗೆ ನರಿ ಬುದ್ಧಿಯವರು ಎಂದು ಹೇಳುವುದೂ ಉಂಟು.

ಅದೇನಿದ್ದರೂ ಮೇಲಿನ ಕತೆಯಲ್ಲಿ ಕೈಗೆಟುಕದ ದ್ರಾಕ್ಷಿಯನ್ನು ಹುಳಿ ಎನ್ನುತ್ತ ನರಿ ತನ್ನ ಜಾಗವನ್ನು ತ್ವರೆ ಮಾಡುವಾಗ ಅದು ತನ್ನ ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳುತ್ತಿತ್ತೇ ಅಥವಾ ಅದು ನರಿಯ ನಕಾರಾತ್ಮಕ ಭಾವನೆಗಳ ಪ್ರತಿಫಲನವೇ? ಇಂತಹ ಎಷ್ಟೋ ಸಂಗತಿಗಳು ನಮ್ಮ ಜೀವನದಲ್ಲಿಯೂ ಹಾದು ಹೋಗುತ್ತದೆಯಲ್ಲವೇ?

ನಮ್ಮ ವ್ಯಾಪ್ತಿಯ ಹೊರಗಿರುವ ಸಂಗತಿಗಳು ನಮ್ಮನ್ನು ಯಾವ ರೀತಿಯಲ್ಲಿ ಪ್ರಭಾವಿತಗೊಳಿಸುತ್ತವೆ? ಐ.ಐ.ಟಿ.ಯಂತಹ ಸಂಸ್ಥೆಗಳಲ್ಲಿ ಮಕ್ಕಳ್ಯಾರಾದರೂ ಕಲಿಯುತ್ತಿದ್ದಾರೆ ಎನ್ನುವ ವಿಷಯ ಕೇಳಿದರೆ 'ಓಹೋ' ಎಂದು ಶ್ಲಾಘನೆಯನ್ನು ಸೂಚಿಸುವಂತೆ ಕೆಲವರ ಹುಬ್ಬು ಮೇಲೇರಿದರೂ ಕೂಡಲೇ ಹಾಗಾದರೆ ಅವನಿಗೆ ವ್ಯವಹಾರ ಜ್ಞಾನ ಕಡಿಮೆಯಿರಬಹುದು ಎನ್ನುವ ಟಿಪ್ಪಣಿ ಕೇಳಿ ಬರುತ್ತದೆ. ಯಾರಾದರೂ ದೊಡ್ಡ ಶ್ರೀಮಂತರು ಎಂದು ಕೇಳಿದರೆ ಖಂಡಿತವಾಗಿಯೂ ಅವರಿಗೆ ಅಹಂಕಾರವಿರುತ್ತದೆ ಎಂದುಕೊಳ್ಳುತ್ತೇವೆ. ಅಂತಹ ಸಂದರ್ಭದಲ್ಲಿ ಅವರ ಪೂರ್ಣ ಹಿನ್ನೆಲೆ ನಮಗೆ ತಿಳಿದಿರುವುದೂ ಇಲ್ಲ. ನಾವು ಕೆಲವು ಯಶಸ್ವಿ ಪುರುಷ (ಮಹಿಳೆ)ಯರತ್ತ ನೋಡುವಾಗ ನಮ್ಮಲ್ಲಿ ಮೆಚ್ಚುಗೆ ಉಂಟಾಗುವಾಗಲೇ ನಾವು ಅವರ ಕುಂದುಕೊರತೆಗಳನ್ನು ಹುಡುಕುತ್ತೇವೆ. ಅವರ ಒಳಗನ್ನು ಕೆದಕಿ, ಅವರು ಜೀವನದಲ್ಲಿ ಸಂತೋಷವಾಗಿ ಇರಲು ಅಡ್ಡ ಬರುವಂತ ಕಾರಣಗಳನ್ನು ಹುಡುಕುತ್ತೇವೆ. ಅದರಿಂದ ಯಾವ ನೆಮ್ಮದಿ ಸಿಗುತ್ತದೆ.?

ವಾಸ್ತವವನ್ನು ಸ್ವೀಕರಿಸುವುದು, ನಮ್ಮ ಸುತ್ತಮುತ್ತಲಿನ ಪರಿಸರದೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು, ನಾವು ಹೇಗಿದ್ದೇವೆಯೋ ಹಾಗೇ ನಮ್ಮನ್ನು ನಾವು ಒಪ್ಪಿಕೊಳ್ಳುವುದು ಮನಸ್ಸಿನ ನೆಮ್ಮದಿಯ ತಳಹದಿ ಎನ್ನುವುದು ನಮಗೆ ತಿಳಿದ ವಿಷಯ. ಅದರರ್ಥ ನಾವು ಪ್ರಯತ್ನವಾದಿಯಾಗಬಾರದು ಎಂದೇನಲ್ಲ. ಆದರೆ ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೆಲವೊಮ್ಮೆ ನಿರೀಕ್ಷಿಸಿದ ಮಟ್ಟವನ್ನು ಮುಟ್ಟದೇ ಇರಬಹುದು. ಅದಕ್ಕಾಗಿ ಖೇದ ಪಡಬೇಕಾದ ಅವಶ್ಯಕತೆಯೇನೂ ಇಲ್ಲ. ನಮಗಿಂತ ಹೆಚ್ಚು ಸಾಧಿಸಿದವರನ್ನು ನೋಡಿ ಕರುಬಬೇಕಾಗಿಲ್ಲ. ಏಕೆಂದರೆ ಕೆಲವರಿಗೆ ಪ್ರತಿಭೆ, ಕೌಶಲ್ಯ, ವ್ಯವಹಾರಿಕ ಚಾತುರ್ಯ ದೈವದತ್ತವಾಗಿ ಬಂದಿರುತ್ತದೆ.

ಎಲ್ಲರ ಕೈಯಲ್ಲೂ ಅವರವರ ಪಾಲಿನ ಬುತ್ತಿಯ ಗಂಟಿದೆ. ಉಳಿದವರ ಬುತ್ತಿಯ ರುಚಿ ಹೇಗಿದ್ದರೂ ನಮ್ಮ ಪಾಲಿನ ತಿಂಡಿಯ ರುಚಿ ಬದಲಾಗುವುದಿಲ್ಲವಲ್ಲ!

ನಮ್ಮ ಪ್ರೀತಿವಂತರು ನೋಡಲು ಹೇಗಿದ್ದರೂ ನಮಗೆ ಇಷ್ಟವಾಗುತ್ತಾರೆ. ಹಾಗೆಯೇ ನೋವಿರಲಿ, ನಲಿವಿರಲಿ ನಮ್ಮ ಜೀವನ ನಮಗೆ ಆಪ್ತವಾದದ್ದು. ಹುಳಿಯಿರಲಿ, ಸಿಹಿಯಿರಲಿ ಬಾಯಿ ಚಪ್ಪರಿಸೋಣ. ಸಹಜವಾಗಿ, ಸುಂದರವಾಗಿ ಬದುಕೋಣ.

e-mail : amitabhagwat@gmail.com

ಅಮಿತಾ ಎಸ್ ಭಾಗವತ್

*PAGE DONATED BY :* ***SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE***

# ಮಾಸ ಮಹಾತ್ಮ್ಯೆ

✍ ಗಣಪತಿ ಭಟ್ಟಿ

*(ಕಳೆದ ಸಂಚಿಕೆಯಿಂದ)*

ವೈಷ್ಣವ ಮತವನ್ನು ಜಾತಿಭೇದವಿಲ್ಲದೆ ಉಪದೇಶ ಮಾಡಿದವರೆಂದರೆ ರಾಮಾನಂದರು. ಇವರು ಸೀತಾರಾಮ ಪೂಜೆಯನ್ನು ಪ್ರಚಾರದಲ್ಲಿ ತಂದರು. ಇವರ ಶಿಷ್ಯರಲ್ಲಿ ಅಂತ್ಯಜನೂ, ಮುಸಲ್ಮಾನನೂ ಸಹ ಇದ್ದರು. ಈ ಮುಸಲ್ಮಾನ ಶಿಷ್ಯನೇ ಕಬೀರನು. ಇವನಾದರೋ ರಾಮಭಕ್ತಿಯನ್ನೇ ಉಪದೇಶಿಸಿದನು. ತುಲಸೀದಾಸರೆಂಬವರಾದರೂ ಉತ್ತರ ಹಿಂದುಸ್ಥಾನದಲ್ಲೆಲ್ಲ ಪ್ರಸಿದ್ಧವಾದ ಹಿಂದಿಭಾಷೆಯಲ್ಲಿ ಬರೆಯಲ್ಪಟ್ಟ ತುಲಸೀದಾಸ ರಾಮಾಯಣವೆಂಬದನ್ನು ಬರೆದು ರಾಮಭಕ್ತಿಯನ್ನೇ ಪುಷ್ಟೀಕರಿಸಿದರು. ವಲ್ಲಭೀಪಂಥವನ್ನು ಸ್ಥಾಪಿಸಿದ ವಲ್ಲಭಾಚಾರ್ಯನೂ, ಸನಕಸಾಂಪ್ರದಾಯ ಪುರಸ್ಕರ್ತನಾದ ನಿಂಬಾರ್ಕನೂ, ಚೈತನ್ಯನೂ, ಮೀರಾಬಾಯಿಯೂ ಕೃಷ್ಣಭಕ್ತಿಯನ್ನು ಪ್ರಸ್ಥಾಪಿಸಿದರು. ಇವರೆಲ್ಲರು ಉತ್ತರ ಹಿಂದುಸ್ಥಾನದವರು.

ಮಹಾರಾಷ್ಟ್ರದಲ್ಲಿ ಜ್ಞಾನದೇವ (ಜ್ಞಾನೇಶ್ವರ), ನಾಮದೇವ, ಏಕನಾಥ, ರಾಮದಾಸ, ತುಕಾರಾಮ ಇವರೇ ಮೊದಲಾದವರು ವಿಷ್ಣುಭಕ್ತಿಯನ್ನು ಪ್ರಬಲಗೊಳಿಸಿದರು. ಇವರಲ್ಲಿ ತುಕಾರಾಮನು ಸಂತಶಿರೋಮಣಿ ಯೆನಿಸಿಕೊಂಡನು. ಮಹಾರಾಷ್ಟ್ರದಲ್ಲಿ ಮುಖ್ಯ ವೈಷ್ಣವ ಕ್ಷೇತ್ರವು ಫಂಡರಪುರವು. ಶ್ರೀವಿಠೋಬನೆಂಬನೇ ದೇವರ ಹೆಸರು. ಈ ಸಂಬಂಧವಾಗಿ ಕೈವಾ|| ಡಾ. ಭಾಂಡಾರಕರರು-'ವಿಠೋಬ ಎಂಬ ಶಬ್ದವು ವಿಷ್ಣು ಎಂಬ ಶಬ್ದದಿಂದ ಆಯಿತು. ಇದೇ ಶಬ್ದಕ್ಕೆ ವಿಠೋಬಾ, ವಿಠ್ಠಲ, ವಿಠೂ ಇತ್ಯಾದಿ ರೂಪಾಂತರಗಳು ಮರಾಠಿಯಲ್ಲಾದವು.' ಎಂದು ಬರೆದಿರುವರು.

ಪುಂಡಲೀಕನೆಂಬ ಸಾಧುವು ಮಾತಾಪಿತೃಗಳ ಸೇವೆಯಲ್ಲಿ ತತ್ಪರನಾಗಿ ದ್ದಾಗ ಶ್ರೀಕೃಷ್ಣನು ಈ ಸಾಧುವಿನ ಬಳಿಗೆ ಬರಲು ಅವನು ಶ್ರೀಕೃಷ್ಣನಿಗೆ ಒಂದು ಇಟ್ಟಂಗಿ (ವೀಟ) ಯನ್ನು ಕೊಟ್ಟು ಅದರ ಮೇಲೆ ನಿಲ್ಲ ಹೇಳಿದನು. ಈ ಪ್ರಕಾರ (ವೀಟದ ಮೇಲೆ) ನಿಂತದ್ದರಿಂದ ಶ್ರೀಕೃಷ್ಣನು ವಿಠೋಬಾ ಎಂಬ ಹೆಸರು ಹೊಂದಿದನೆಂದೂ ಒಂದು ಕಥೆಯಿದೆ. ಮಹಾರಾಷ್ಟ್ರದಲ್ಲಿ ವೈಷ್ಣವ ಧರ್ಮವನ್ನೂ ಮುಖ್ಯವಾಗಿ ಶ್ರೀಕೃಷ್ಣ-ರುಕ್ಮಿಣಿಗಳ ಆರಾಧನೆಯನ್ನೂ ಪುಂಡಲೀಕನೆಂಬ ಸಾಧುವೇ ಪ್ರಚಾರದಲ್ಲಿ ತಂದವನಾಗಿದ್ದು ಇವನ ಹೆಸರಿನಿಂದಲೇ ಪಾಂಡಲೀಕ ಕ್ಷೇತ್ರವೆಂಬ ಹೆಸರು ಬಿದ್ದಿರಬಹುದು.

ಮಹಾರಾಷ್ಟ್ರದಲ್ಲಿ ತುಕಾರಾಮ, ನಾಮದೇವ ಮೊದಲಾದ ಶೂದ್ರವರ್ಣದ ಸಾಧುಗಳ ಉಪದೇಶದಿಂದ ಈ ವೈಷ್ಣವಧರ್ಮದ ಪ್ರಸಾರವು ಶೂದ್ರವರ್ಣದಲ್ಲಿ ವಿಶೇಷವಾಗಿ ಆಯಿತು. ಪಂಢರಾಪುರದ ಯಾತ್ರೆಗೆ ನೆರೆಯುವ ಭಕ್ತಮಂಡಲಿಯಲ್ಲಿ ವಾರಕರೀಸಾಂಪ್ರದಾಯದವರೇ ಪ್ರಮುಖರು. ಇವರು ಕೈಯಲ್ಲಿ ಪತಾಕೆಯನ್ನು ಧರಿಸಿ ಭಜನೆ ಮಾಡುತ್ತಾ ಕುಣಿಯುತ್ತಾ ಈ ಏಕಾದಶೀ ದಿನ ಪಂಢರಪುರಕ್ಕೆ ಹೋಗುವರು. ಇವರ ಪಾಲಕಿಗಳು ಎಂಟು ಸ್ಥಾನಗಳಿಂದ ಹೊರಡುವವಂತೆ. ಈ ಪಾಲಕಿಗಳಲ್ಲಿ ಜ್ಞಾನೇಶ್ವರ, ತುಕಾರಾಮ, ಏಕನಾಥ ಮೊದಲಾದ ಸಾಧುಗಳ ಪಾದುಕೆಗಳನ್ನಿಟ್ಟು ಅದನ್ನು ಮೆರೆಸುತ್ತಾ ಊರಿಂದೂರಿಗೆ ಹೋಗುತ್ತಾ ಪ್ರಯಾಣವಾಗಿ ದಶಮೀ ದಿನ ಸಂಜೆಗೆ ಫಂಡರಪುರಕ್ಕೆ ಮುಟ್ಟುವರಂತೆ. ನಡುವಿನ ಊರುಗಳಲ್ಲಿ ಭಜಕರ ಸಮುದಾಯವು ಬಲಿಯುತ್ತಾ ಹೋಗುವುದಲ್ಲದೆ ಬಂದ ಭಕ್ತಮಂಡಲಿಯ ಊಟ ಉಪಚಾರಗಳ ವ್ಯವಸ್ಥೆಯನ್ನು ಆಯಾಯ ಊರ ನಿವಾಸಿಕರು ಮಾಡುವರಂತೆ. ಈ ಪ್ರಕಾರ ಕೂಡಿದ ಈ ವಾರಕರೀ ಪಂಥದ ಸ್ತೋಮವು ಎರಡು ಲಕ್ಷಕ್ಕೆ ಮುಟ್ಟುವುದು. ಈ ಜನರು ತುಕಾರಾಮನ ಅಭಂಗಗಳನ್ನೂ, ವಿಠೋಬನ ನಾಮವನ್ನೂ ಉಚ್ಚಾರ ಮಾಡುತ್ತಾ ಭಕ್ತಿಭಾವದಿಂದ ತುಂಬಿದವರಾಗುವರು. ಇವರು ಇತರ ಸಾಧನಗಳಿಗಿಂತ ಭಕ್ತಿಭಾವದ ಭಜನವೇ ಶ್ರೇಷ್ಠವಾದದ್ದೆಂದು ತಿಳಿದು ನಡೆಯುವರು. ಈ ಪ್ರಕಾರ ಈ ಆಷಾಢೀ ಏಕಾದಶಿಯಂಥ ಪುಣ್ಯ ದಿನದಲ್ಲಿ ಆಸೇತುಹಿಮಾಚಲ ಕೋಟ್ಯವಧಿ ಹಿಂದೂ ಜನರು ಭಕ್ತಿಪೂರ್ಣರಾಗಿ ಭಗವಂತನ ಸ್ಮರಣೆ ಮಾಡಿ ಈ ಭರತ ಭೂಮಿಯ ವಾತಾವರಣದಲ್ಲಿ ಒಂದು ಅಲೌಕಿಕವಾದ ದೈವೀ ತೇಜಸ್ಸನ್ನು ಉತ್ಪನ್ನ ಮಾಡುವರೆಂದು ಹೇಳಬಹುದು.



**ಚಾತುರ್ಮಾಸ್ಯವ್ರತ –** ದ್ವಾದಶೀ ದಿನ ಪಾರಣವಾದ ಮೇಲೆ ಸಾಯಂಕಾಲದಲ್ಲಿ ಶ್ರೀವಿಷ್ಣುವಿನ ಪೂಜೆ ಮಾಡಿ ಈ ವ್ರತಸಂಕಲ್ಪ ಮಾಡಬಹುದು. ಅಥವಾ ಏಕಾದಶೀ ದಿನವೇ ಸಂಕಲ್ಪ ಮಾಡಬಹು ದೆಂದಿರುತ್ತದೆ. ಈ ವ್ರತದಲ್ಲಿ ಮೊದಲನೇ ತಿಂಗಳು ಶಾಕವನ್ನೂ, ಎರಡನೇ ತಿಂಗಳು ಮೊಸರನ್ನೂ, ಮೂರನೇ ತಿಂಗಳು ಹಾಲನ್ನೂ, ನಾಲ್ಕನೇ ತಿಂಗಳು ದ್ವಿದಲ ಧಾನ್ಯಗಳನ್ನೂ ಬಿಡಬೇಕೆಂದು ವಿಧಿಯಿರುತ್ತದೆ. ಈ ವ್ರತವು ಎಲ್ಲರೂ ಆಚರಿಸುವಂಥದ್ದು; ಅಂದರೆ ನಿತ್ಯವಿರುತ್ತದೆ. ಆದರೆ ಇದರ ಪ್ರಚಾರವು ಕಡಿಮೆ. ಸಾಮಾನ್ಯವಾಗಿ ಚತುರ್ಥಾಶ್ರಮಿಗಳು ಮಾತ್ರ ಆಚರಿಸುವ ರೂಢಿಯಿರುತ್ತದೆ. ಈ ವ್ರತಿಯಾದವನು ಪರಸ್ಥಳಕ್ಕೆ ಹೋಗದೆ ಈ ನಾಲ್ಕು ತಿಂಗಳು ಪುರಾಣ ಪುಣ್ಯಚರಿತ್ರಗಳ ಶ್ರವಣ ಮಾಡತಕ್ಕದ್ದು; ವ್ರತಾಚರಣೆಗಳಿಗೆ ಈ ಕಾಲವು ಹೆಚ್ಚು ಪ್ರಶಸ್ತವಾಗಿದೆ. ಈ ಚಾತುರ್ಮಾಸ್ಯದ ಮುಖ್ಯ ನಿರ್ಬಂಧವು ಆಹಾರ-ವಿಹಾರಗಳದ್ದಾಗಿದೆ. ಆದರೆ ಈ ನಿರ್ಬಂಧವನ್ನು ಪಾಲಿಸುವವರೇ ವಿರಳ. ಹೀಗಾದ್ದರಿಂದಲೇ ಪ್ರಜೆಗಳು ಕ್ಷೀಣರೂ, ಹತವೀರ್ಯರೂ ಆಗ ಹತ್ತಿದ್ದಾರೆ. ಮೆಟ್ಟು ಮೆಟ್ಟಿಗೆ ಚಹಾ, ಕಾಫಿಗಳ ಅಂಗಡಿಗಳುಳ್ಳ ಈಗಿನ ಶಹರಗಳಲ್ಲಿ ತಿಂಡಿಬಾಕತನವು ಹೆಚ್ಚಾದ್ದರಿಂದ ಈ ವ್ರತದ ಕಲ್ಪನೆಯೇ ಇಲ್ಲದಂತಾಗಿದೆ. ಇಂಥ ಅಂಗಡಿಗಳಲ್ಲಿ ಮಾರ್ಗದ ಧೂಳು ಮುಸುಕಿರುವ ಪದಾರ್ಥಗಳನ್ನಾದರೂ ಶುದ್ಧಾಶುದ್ಧತೆಯ ಪರಿವೆಯಿಲ್ಲದೆ ಅನಾವಶ್ಯಕವಾಗಿಯಾದರೂ ತಿಂದು, ದುಡ್ಡು ಹಾಗೂ ಪ್ರಕೃತಿಯ ಅಪವ್ಯಯ ಮಾಡಿಕೊಳ್ಳುವ ತರುಣರನ್ನು ಹೇರಳವಾಗಿ ಕಾಣಬಹುದು. ಮಡಿಮೈಲಿಗೆಗಳ ನಿರ್ಬಂಧವು ಕಡಿಮೆಯಾದದ್ದು ಇದಕ್ಕಿನ್ನಿಷ್ಟು ಬಲಕೊಟ್ಟಿದೆ. ಈ ಪ್ರಕಾರದ ಸ್ವೈರ ವರ್ತನವು ಸಮಾಜಕ್ಕೆ ಅನಿಷ್ಟಕರವಾದದ್ದಿರುವುದರಿಂದ ಜನತೆಯ ಆರೋಗ್ಯವನ್ನು ಕಾಯಲಿಕ್ಕೆ ಅವಶ್ಯಕಗಳಾದ ಇಂಥ ವ್ರತಗಳ ಕಡೆಗೆ ಸಮಾಜ ಸುಧಾರಕರು ಲಕ್ಷ್ಯ ಪೂರೈಸುವುದು ಅತ್ಯಾವಶ್ಯಕವಾಗಿದೆ. ಇಂಥ ವ್ರತಪ್ರಚಾರಕರಾದ ಪ್ರಾಚೀನ ಮಹರ್ಷಿಗಳು ವೈದ್ಯಶಾಸ್ತ್ರವನ್ನನುಲಕ್ಷಿಸಿಯೇ ಈ ವ್ರತಗಳನ್ನು ನಿಯಮಿಸಿರು ವರೆಂಬುವುದು ಸ್ಪಷ್ಟವಾಗುತ್ತದೆ. ಪ್ರಾಚೀನರು ವೈದ್ಯಶಾಸ್ತ್ರದೃಷ್ಟಿಯಿಂದ ವಿಚಾರ ಮಾಡಿ ಬೇರೆ ಬೇರೆ ಋತುಗಳಲ್ಲಿ ಬೇರೆ ಬೇರೆ ಆಹಾರ ತಕ್ಕೊಳ್ಳುವ ನಿರ್ಬಂಧ ಮಾಡಿರುತ್ತಾರೆ. ಉತ್ತರಾಯಣ ದಕ್ಷಿಣಾಯನಗಳಲ್ಲಿ ಸೂರ್ಯಕಿರಣವು ಸರಿಯಾಗಿ ಸಿಗದ್ದರಿಂದ ಹವೆಯಲ್ಲಿ ಕೆಲವೊಂದು ವ್ಯತ್ಯಯ ವುಂಟಾಗುವುದನ್ನನುಲಕ್ಷಿಸಿ ಆಯಾಯ ಕಾಲಕ್ಕೆ ಮನುಷ್ಯ ದೇಹದಲ್ಲಿ ಸಹ ಹೆಚ್ಚು ಕಡಿಮೆಯಾಗುವುದನ್ನು ಕಂಡು ಹಿಡಿದು ಇಂಥ ನಿರ್ಬಂಧ ಮಾಡಿದ್ದಾರೆ. ಗ್ರೀಷ್ಮ ಹಾಗೂ ವರ್ಷ ಋತುಗಳಲ್ಲಿ ಪ್ರಕೃತಿಯು ಕ್ಷೀಣವಾಗುತ್ತದೆಂತಲೂ, ಶರತ್ ಹಾಗೂ ವಸಂತ ಋತುಗಳಲ್ಲಿ ಮಧ್ಯಮವಾಗುಳಿಯುವುದೆಂತಲೂ, ಹೇಮಂತ ಶಿಶಿರ ಋತುಗಳಲ್ಲಿ ಉತ್ತಮವಾಗಿರುವದೆಂತಲೂ ನಿರ್ಣಯಿಸಿದ್ದಾರೆ. ಈ ಕಾರಣದಿಂದ ಪ್ರಕೃತಿಮಾನದಂತೆ ಪಚನವಾಗುವ ಆಹಾರಗಳನ್ನು ಸೇವನೆ ಮಾಡಬೇಕೆಂದೂ, ಪಚನಕ್ಕೆ ಜಡವಾದವುಗಳನ್ನು ವರ್ಜ್ಯ ಮಾಡಬೇಕೆಂದೂ ವಿಧಿಸಿದ್ದಾರೆ. ಈ ತತ್ವವನ್ನನುಸರಿಸಿಯೇ ಚಾತುರ್ಮಾಸ್ಯದಲ್ಲಿ ಕೆಲವು ಪದಾರ್ಥಗಳನ್ನು ವರ್ಜ್ಯ ಮಾಡಬೇಕೆಂದು ವಿಧಿಯಿರುತ್ತದೆ. ಇದರ ಮೇಲೆ ಶ್ರದ್ಧೆಯುಳ್ಳವರಾಗಿ ನಡೆದು ದೇಹಾರೋಗ್ಯ ಹೊಂದುವುದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯವಾಗಿರುತ್ತದೆ.

*(ಮುಂದುವರಿಯುವುದು)*

*PAGE DONATED BY : **HEGDE HOSPITAL, CHEMBUR**, COURTESY : **DR. DINESH HEGDE***

# ಮೇಘದೂತವನ್ನು ಕನ್ನಡಕ್ಕಿಳಿಸಿದ ಕನ್ನಡ ಕಣ್ಮಣಿಗಳು

✍ ಶೈಲಜಾ ಹೆಗಡೆ, ಮುಂಬಯಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಕನ್ನಡ ಮೇಘಸಂದೇಶ : ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ** : ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳ 'ಕನ್ನಡ ಮೇಘಸಂದೇಶ' ಕಾವ್ಯವು ಅನುವಾದ ಸಾಹಿತ್ಯಗಳಲ್ಲಿಯೇ ಪುರಾತನವಾದುದು. ಇದು 1931ರಲ್ಲಿ ಮೊದಲ ಮುದ್ರಣವನ್ನು ಕಂಡಿತು. ಇದರ ಎರಡನೆಯ ಮುದ್ರಣವು 1954ರಲ್ಲಿ ನಡೆಯಿತು. ಪೂರ್ವಮೇಘ ಮತ್ತು ಉತ್ತರಮೇಘವೆಂದು ವಿಭಾಗಿಸಲ್ಪಟ್ಟ ಈ ಕಾವ್ಯದಲ್ಲಿ ಒಟ್ಟು 164 ಪದ್ಯಗಳಿವೆ. ಶಾಸ್ತ್ರಿಯವರು ಚಿಕ್ಕ ಗಾತ್ರದ ಆರು ಸಾಲಿನ ಕುಸುಮ ಷಟ್ಪದಿಯನ್ನು ಕಾವ್ಯಬಂಧಕ್ಕೆ ಆರಿಸಿಕೊಂಡಿದ್ದಾರೆ. ಹಾಗಾಗಿ, ಮೂಲ ಕಾವ್ಯದ ಒಂದು ಶ್ಲೋಕದ ಅರ್ಥನಿರೂಪಣೆಗೆ ಎರಡು ಅಥವಾ ಮೂರು ಪದ್ಯಗಳ ಅವಶ್ಯಕತೆ ಉಂಟಾಗುತ್ತದೆ. ಆದ್ದರಿಂದ, ಶಾಸ್ತ್ರಿಯವರ ಕಾವ್ಯ ಮೂಲಕಾವ್ಯಕ್ಕಿಂತ ಸುದೀರ್ಘವಾಗಿದೆ. 'ನಿವೇದನೆ'ಯಿಂದ ಇವರ ಕಾವ್ಯ ಪ್ರಾರಂಭವಾಗುತ್ತದೆ.

ಸುರನಿಕರ ಪರಿಚರಿತೆ
ಸರಸಿರುಹ ಮೃದುಚರಣೆ
ಶರದುದಿತ ಶಶಿವದನೆ ಲೋಕಶರಣೆ ।
ಸರಸಿಜಾಸನನರಸಿ
ಕರುಣಾಸುಧಾಸರಸಿ
ದುರಿತವಿತತಿಯನೊರಸಿ ಪಾಲಿಸೆನ್ನಂ ॥

ಕರುಣಾಶರಧಿಯಾದ ನೀನು ದುರಿತರಾಶಿಗಳನ್ನು ತರಿದು ಪಾಲಿಸೆಂದು ಕವಿ ಪ್ರಾರ್ಥಿಸಿದ್ದಾರೆ. ಕಾವ್ಯದಲ್ಲಿ ಆದಿಪ್ರಾಸವನ್ನೂ, ಕೆಲವು ಕಡೆ ಅಂತ್ಯಪ್ರಾಸವನ್ನೂ ಕಾಣಬಹುದು. 'ನಿವೇದನೆ'ಯ ಐದು ಪದ್ಯಗಳ ನಂತರ ಮೂಲಕಾವ್ಯದಲ್ಲಿ ಉಲ್ಲೇಖಿಸದ ಪೂರ್ವಕಥೆಯನ್ನು ಕಾಲ್ಪನಿಕವಾಗಿ ಚಿತ್ರಿಸಲಾಗಿದೆ. ಯಕ್ಷಪತ್ನಿ ಮುಡಿದ ಕುಂದ ಪುಷ್ಪಗಳನ್ನು ತಂದು ಒಡೆಯ ಕುಬೇರನಿಗಿತ್ತಾಗ, ಆತನ ಕೋಪಕ್ಕೆ ತುತ್ತಾಗಿ 'ಒಂದು ವರ್ಷಕಾಲ ಪತ್ನಿಯನ್ನಗಲಿ ಇರು'ವಂತೆ ಯಕ್ಷನಿಗೆ ಶಾಪ ಬಂದೊದಗಿತೆಂಬುದು ಕವಿಯ ಕಲ್ಪನೆ. ಅದೇ ರೀತಿ, ವಿರಹತಪ್ತ ಯಕ್ಷಪತ್ನಿ ಬದುಕಿರುವಳೆಂಬ ವಿಷಯದಲ್ಲೂ ಶಾಸ್ತ್ರಿಗಳು ನಿಶ್ಚಯವಾಗಿ ನುಡಿದಂತೆ ಅನುವಾದಿಸಿದ್ದಾರೆ. ಯಕ್ಷನು ತನ್ನ ಪತ್ನಿಯ ಇರುವಿಕೆಯ ಕುರಿತು ಸಂಶಯ ಪಡಬಾರದೆಂದು ನುಡಿಯುತ್ತಾನೆ. ಪದ್ಯದ ಕೆಲವು ಸಾಲುಗಳು ದೃಷ್ಟಾಂತವಾಗಿ ನಿಲ್ಲಬಲ್ಲವು.

ಆಕೆ ದಿನಗಳನೆಣಿಸಿ
ನೂಕುವಳು ಸಮಯಮಂ
ತಾ ಕುಲೀನೆಯು ಸತಿಯು ಬದುಕಿರ್ಪಳೈ

ಕಾಳಿದಾಸನ ಉಪಮೆಯನ್ನೂ ಶಾಸ್ತ್ರಿಗಳು ಅತ್ಯಂತ ಸೊಗಸಾಗಿ ಅನುವಾದಿಸಿದ್ದಾರೆ. 'ರತ್ನಚ್ಛಾಯಾ ವ್ಯತಿಕರ ಇವ..' ಎಂಬ ಶ್ಲೋಕವನ್ನು,

ಪೊಳೆವ ರತುನಗಳಂತೆ
ತಳತಳಿಪ ಶಕ್ರಧನು
ಸುಳಿದು ಮತ್ತದ ಮೇಲೆ ಕಂಗೊಳಿಸುತೆ ।
ಜಳದ ನಿನ್ನಯ ತನುಗೆ
ಪೊಳೆವ ತೊಡವಾಗಿಹುದು
ಚೆಲುವ ಕೃಷ್ಣಗೆ ನವಿಲುಗರಿಯ ತೆರದೆ ॥



ಸೊಗಸಾದ ಉಪಮೆಯು ಜೊತೆಗೆ ಶಾಸ್ತ್ರಿಯವರ ಪದ್ಯ ರಚನೆಯಲ್ಲಿ ಪೊಳೆವ, ಪುತ್ತದ, ಪೊಸ, ಪುದಿನ, ಪೊರೆಸಾರ್ದು, ಪಿರಿದು, ಪೋಗಿ, ಪೊರಸೂಸಲು ಮುಂತಾದ 'ಪ'ಕಾರಯುಕ್ತ ಪದಗಳು ಹೇರಳವಾಗಿ ದೊರೆಯುತ್ತವೆ. ಅಲಕೆಯ ಹೆಣ್ಣುಮಕ್ಕಳು ಮಂದಾಕಿನೀ ತೀರದ ಮರಳಿನಲ್ಲಿ ಚಿನ್ನದ ಚೆಂಡುಗಳನ್ನು ಹುಗಿಸುವ ಆಟವನ್ನು ಆಡುವ ಕುರಿತ ಪ್ರಸ್ತಾಪ ಮೂಲಕಾವ್ಯದಲ್ಲಿ ಬಂದಿದೆ. ಅದಕ್ಕೆ ಇತರ ಆಟಗಳನ್ನೂ ಸೇರಿಸಿ ಶಾಸ್ತ್ರಿಯವರು, ತಮ್ಮ ಅನುವಾದ ಕೌಶಲದಿಂದ ಆಟಗಳ ಸರಮಾಲೆಯನ್ನೇ ಹೆಣೆದು ಕಾವ್ಯದ ಸೊಬಗನ್ನು ಹೆಚ್ಚಿಸಿದ್ದಾರೆ. ಅಂತೆಯೇ, ಪರಶಿವನ ಅಟ್ಟಹಾಸವನ್ನು ಬಣ್ಣಿಸುವ 'ಗತ್ವಾ ಚೋರ್ಧ್ವಂ ದಶಮುಖಭುಜೋ..' ಎಂಬ ಶ್ಲೋಕದ ಅನುವಾದವನ್ನು ಎರಡು ಪದ್ಯಗಳಲ್ಲಿ,

ಅಮರಿಯರ ವಿಭ್ರಮಕೆ
ಸಮನಿಸಿದ ಮಣಿಮುಕುರ
ಕುಮುದ ಕುಟ್ಮಲ ವಿಷದ ರುಚಿರ ಶಿಖರ ।
ಅಮರತತಿಗಾವಾಸ
ಮುಮೆಯರಸನುರುಹಾಸ
ಸಮಮೆನಿಪ ಕೈಲಾಸ ಮೆರೆವುದಲ್ಲಿ ॥

ಎರಡನೆಯ ಪದ್ಯದಲ್ಲಿ,

ಸೊಕ್ಕಿನಲಿ ದಶಮುಖನು
ತೆಕ್ಕೆಯಿಂ ಬಿಗಿದಪ್ಪಿ
ಜಕ್ಕುಲಿಸಲಾ ಗಿರಿಯು ಬೇರು ಸಡಲಿ ।
ಚಕ್ಕನುರುಳುವ ಭರಕೆ
ಕಿಕ್ಕಿರಿದ ಶೃಂಗಗಳು
ಕುಕ್ಕಲಿರಿದಂದದಲಿ ಬಾಗಿರುವವು ॥

ರಸಾನುಯುಕ್ತ ಸಹಜಪ್ರಾಸದ ಅರ್ಥಗರ್ಭಿತ ಪದಗಳು ಲಾಲಿತ್ಯಪೂರ್ಣವಾಗಿ ಜೋಡಿಸಲ್ಪಟ್ಟಿವೆ. ಕವಿಯ ಶಬ್ದಚಾತುರ್ಯ ಬೆರಗು ಮೂಡಿಸುವಂತಹುದು. ಮೂಲದ 'ರಿಕ್ತಂ ಸರ್ವೋ ಭವತಿ ಹಿ ಲಘುಃ ಪೂರ್ಣತಾ ಗೌರವಾಯ' ಅರ್ಥಾಂತರನ್ಯಾಸ ಶ್ಲೋಕವನ್ನು ಶಾಸ್ತ್ರಿಗಳು,

ವನಗಜದ ಮದಜಲದ
ತನಿಸೊಗಡು ಬೆರೆದಿರುವ
ವನಲತೆಯೊಳುರುಳುರುಳಿ ಪರಿವ ನೀರಂ ।
ಹನಿಗರೆದು ಲಘುವಾಗ
ಲನುವರೆದು ಮೊಗೆದೀಂಟ
ಲನಿಲನಲ್ಲಾಡಿಸನು ನಿನ್ನ ತನುವಂ ॥

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# The Essence of Bhagavad-Gita

✍ **Shraddha Hegde** (BE-Engg)



**Gunatraya Vibhaga Yoga :** We had seen the difference between Body and Soul in detail previously. In this chapter, the three gunas present in material nature which influences the living entity- its characteristics and how to overcome them is given in detail.

Shri Krishna explains the nature of material energy which consists of sattva(goodness), rajas(passion) and tamas(ignorance) which forms the basis of one's character. These three qualities coexist in the body, mind and intellect of every individual in different proportions at different times. The quality of sattva is purity of knowledge which leads to light and illumination. This restrains one to knowledge and happiness. The quality of rajas is attraction and longing. This quality helps to create a desire for objects and binds us to work. The third quality is ignorance and delusion which creates indolence in us.

When Sattva is on ascent, there is an overflow of right perception and knowledge. When Rajas gains predominance there is desire and Tamas taking prevalence pushes us to darkness and confusion. When one rises above the three Gunas, he will be liberated from the material world. So, Arjuna asks about the characteristics and behaviour of the person who has risen above these material modes. Shri Krishna explains that the qualities of liberated souls i.e., Trigunaateeta is: one states equipoised at all times, unaffected by actions of Prakriti. He receives dualities of life i.e., happiness and sadness in same manner and dedicating all his actions to God. Thus, Shri Krishna lays out a map on how we can perform our daily activities without being attached with pure devotion to God which eventually helps transcend Trigunaas.

*(To be continued...)*

---

ಸಾರಮಾಗಿಹುದಲ್ತೆ
ಗೌರವಕೆ ಕಾರಣವು
ಸಾರಮಿಲ್ಲದುದೆಲ್ಲ ಲಘುವೆನಿಪುದು ।
ನೀರುಗೊಳದಿಹ ಮುಗಿಲ
ಪಾರಿಪನು ಮಾರುತನು
ನೀರುದುಂಬಿದ ಮುಗಿಲ ಮಿಸುಗಲರಿಯ ॥

ಎಂದು ಮೂಲಕ್ಕೆ ಸರಿಸಾಟಿಯಾಗಿ ಅನುವಾದಿಸಿದ್ದಾರೆ. ಯಕ್ಷನ ಪ್ರಾರ್ಥನೆಯನ್ನು ಸ್ವೀಕರಿಸಿದ ಮೇಘರಾಜ ಅಲಕೆಗೆ ತೆರಳಿ, ಆತನ ಪತ್ನಿಗೆ ಸಂದೇಶವನ್ನು ತಲುಪಿಸುತ್ತಾನೆ. ಜಲದನ ನುಡಿಯನ್ನು ಆಲಿಸಿದ ಧನದ ದಯೆದೋರಿ ಯಕ್ಷನ ಶಾಪ ವಿಮೋಚನೆಗೊಳಿಸಿ, ಅವನಿಗೆ ಸಕಲ ಭೋಗ ಭಾಗ್ಯವನ್ನಿತ್ತು ಸಲಹಿದನೆಂದು ಸಾರುತ್ತ ಕಾವ್ಯ ಮುಕ್ತಾಯಗೊಳ್ಳುತ್ತದೆ.

ಜಲಧರನ ವಚನವನು
ನಲಿದು ಲಾಲಿಸಿ ಧನದ
ನೊಲಿದು ಶಾಪವ ಕಳೆದು ಸದಯನಾಗಿ ।
ಕಲೆತ ದಂಪತಿಗಳಿಗೆ
ಹಲವು ಭೋಗವನಿತ್ತು
ಸಲಹಿದಂ ಮುದದಿಂದ ನಲಿದರವರುಂ ॥

ಕಾಳಿದಾಸನ ಮೇಘದೂತ ಕಾವ್ಯದಲ್ಲಿ ಉಲ್ಲೇಖಿಸದ ಮುಂದಿನ ಕಥಾಭಾಗವನ್ನು ಕಾಲ್ಪನಿಕವಾಗಿ ಹೆಣೆದು, ಕವಿ ಮೂರು ಸ್ವರಚಿತ ಪದ್ಯಗಳಲ್ಲಿ ವರ್ಣಿಸಿ ಕಾವ್ಯ ಸುಖಾಂತವಾಗುವಂತೆ ಅನುವಾದಿಸಿದ್ದಾರೆ. ಅಲ್ಲದೆ, ಕಾಳಿದಾಸನ ನುಡಿ, ಕೋಲುಜೇನಿನ ಗುಡಿ ಎಂದು ಕವಿ ಬಣ್ಣಿಸಿದ್ದಾರೆ.

ಕಾಳಿದಾಸನ ನುಡಿಯು
ಕೋಲುಜೇನಿನ ಗುಡಿಯು
ಪೇಳಿದೆನು ಕನ್ನಡದ ನುಡಿಯಿನಿದನು ।
ಕೇಳಿ ಕಳೆಯರಿದವರು
ಮೇಲೆನಿಪ ರಸಭಾವ
ದೇಳಿಗೆಗೆ ಮುದಗೊಳಲು ಸಫಲಮಲ್ತೆ ॥

ಕೋಲುಜೇನಿನ ಸವಿಯು ಅತ್ಯಂತ ಮಧುರವಾದುದು. ಸುಲಲಿತ ಪದಬಂಧಗಳಿಂದ ಸವಿಗನ್ನಡದ ಅಚ್ಚಿನಲ್ಲಿ ಹದಗೊಳಿಸಿ ಸುರಿದ ಸುಬ್ರಹ್ಮಣ್ಯ ಶಾಸ್ತ್ರಿಗಳ ಅನುವಾದ ಕಾವ್ಯವೂ ಕೋಲುಜೇನಿನ ಸವಿಯನ್ನೇ ನೀಡಿ ವಾಚಕರನ್ನು ಮುದಗೊಳಿಸುವಲ್ಲಿ ಸಂದೇಹವಿಲ್ಲ. ಮೇಘದೂತ ಕಾವ್ಯದ ಎಲ್ಲ ಅನುವಾದ ಕಾವ್ಯಗಳಲ್ಲಿ ಮೊದಲನೆಯದಾದ ಇದು ಉಳಿದ ಕಾವ್ಯಗಳಿಗೆ ಪ್ರೇರಣೆ ನೀಡಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಹೆಚ್ಚಿನ ಕವಿಗಳು ಇವರ ಕಾವ್ಯವನ್ನು ಗೌರವಪೂರ್ವಕವಾಗಿ ಉಲ್ಲೇಖಿಸಿದ್ದಾರೆ. ಸುಬ್ರಹ್ಮಣ್ಯ ಶಾಸ್ತ್ರಿಯವರಿಗೆ ಸಾಹಿತ್ಯರತ್ನಂ ಹಾಗೂ ಆಸ್ಥಾನ ಮಹಾವಿದ್ವಾನ್ ಎಂಬ ಬಿರುದುಗಳೂ ದೊರೆತಿವೆ.

*(ಮುಂದುವರಿಯುವುದು)*

# ಮೃಗನಯನಾ

✍ ಡಾ. ಜಯಂತ ಕಾಯ್ಕಿಣಿ

*(ಕಳೆದ ಸಂಚಿಕೆಯಿಂದ)*

ದಾದರ್‌ನ ಕೇಟರಿಂಗ್ ಕಾಲೇಜಿನಲ್ಲಿ ಆಹಾರ ವಿಜ್ಞಾನದಲ್ಲಿ ಪದವೀಧರನಾದ ಹಸ್ತಾಕ್ಷರ, ಪ್ರೋಟೀನ್ ವಿಶೇಷ ಪದಾರ್ಥಗಳಲ್ಲಿ ವಿಶೇಷ ಪ್ರಯೋಗಗಳನ್ನು ಮಾಡಿ, ಮುಂಬಯಿಯ ಸನ್ ಎನ್ ಸ್ಯಾಂಡ್, ಎಂಬೆಸಿಡರ ಇಂಥ ಆಢ್ಯ ಹೊಟೇಲುಗಳ ರೆಸ್ಟುರಾಗಳಲ್ಲಿ ಎಪ್ರೆಂಟಿಸ್ ಎಂದು ಕೆಲಸ ಮಾಡುತ್ತಿದ್ದ. ಆಪರೇಷನ್ ಮಾಡುವಾಗ ಮಾತ್ರ ಡಾಕ್ಟರು, ದಾದಿಯರು ಧರಿಸುತ್ತಾರೆ ಎಂದುಕೊಂಡಿದ್ದ ಮೇಲ್ ನಿಲುವಂಗಿಯನ್ನು ಮೀನು ಹುರಿಯುವಾಗಲೂ, ಇಂಪೋರ್ಟೆಡ್ ಫಳಫಳ ಚೂರಿಯಿಂದ ತರಕಾರಿಯನ್ನು ನೀಟಾಗಿ ಹೆಚ್ಚುವಾಗಲೂ-ಹಾಕಿಕೊಳ್ಳಬೇಕು ಎನ್ನುವ ಈ ಕ್ಷೇತ್ರ ಅವನಿಗೆ ಸಂತಸವನ್ನು ನೀಡುತ್ತಿತ್ತು. ಕ್ರಾಫರ್ಡ್ ಮಾರ್ಕೆಟ್ಟಿನಿಂದ ಬಂದು ಹೊಟೇಲುಗಳ ಹಿಂಭಾಗದಲ್ಲಿ ಟೆಂಪೋಗಳಿಂದ ಇಳಿಸಲ್ಪಡುವ ತರಹಾವರಿ ತರಕಾರಿಗಳ ಗುಣಮಟ್ಟದ ಪರೀಕ್ಷೆಯಿಂದ ಹಿಡಿದು, ಅವುಗಳ ಸ್ವಚ್ಛತೆ, ದಾಸ್ತಾನು ಎಲ್ಲವನ್ನೂ, ಔಷಧಿ ತಯಾರಿಸುವ ಕಂಪನಿಗಳ ಕಚ್ಚಾ ಸರುಕಗಳಷ್ಟೇ ಎಚ್ಚರದಿಂದ ನಿಭಾಯಿಸಲೇಬೇಕಾಗಿತ್ತು. ರೆಸ್ಟುರಾದ ಅತ್ಯಾಧುನಿಕ ಅಡುಗೆ ಮನೆಯುನ್ನು ಆಪರೇಷನ್ ಥೇಟರಿನಷ್ಟೇ ನಿರ್ಮಲವಾಗಿ ಚೊಕ್ಕವಾಗಿ ಇರಿಸಬೇಕಾದ, ಬೇರೆ ಬೇರೆ ದೇಶಗಳ ಪದಾರ್ಥಗಳ ಕುರಿತು ವಿಶೇಷ ಪರಿಣತಿಯನ್ನು ಜಾರಿಯಲ್ಲಿಟ್ಟು ಕೊಳ್ಳಬೇಕಾದ- ಈ ಕ್ಷೇತ್ರದಲ್ಲಿ ಬರೀ ಪುರುಷರೇ ನಿರತರಾಗಿರುವುದು ಅವನಿಗೆ ಇನ್ನೂ ಏನೋ ವಿಶೇಷ ಮಜವನ್ನು ಕೊಡುತ್ತಿತ್ತು. ಆಯಿಯ ಅಂತರ್ಧಾನದ ನಂತರ ಅಶಕ್ತಳಾದ ಅಜ್ಜಿ ತನಗೂ ಅಪ್ಪನಿಗೂ ಝುಣಕಾ, ಪೋವಾ, ಥಾಲಿಪಿಟ್ಟು, ಆಮ್ಲೆಟ್ಟು, ಉಸಳಿ ಮಾಡುವುದನ್ನು ಒಂದೊಂದೇ ಕಲಿಸುವಾಗ ಮತ್ತೆ ಮತ್ತೆ ಅದೆಂಥದೋ ಒಳಗುದಿಯ ನಿಟ್ಟುಸಿರನ್ನು ಬಿಡುತ್ತಿದ್ದುದು ನೆನಪಾಗಿ ಛೇ ಅನಿಸುತಿತ್ತು. 'ಮನೇಲಿ ಅಡಿಗೆ ಯಾರು ಮಾಡ್ತಾರೋ? ಅಂತ ಯಾರಾದ್ರೂ ಕೇಳಿದ್ರೆ ಅಜ್ಜಿ ಮಾಡ್ತಾಳೆ ಅಂತ ಸುಳ್ಳು ಹೇಳಬೇಡಾ. ದಿಗ್ಯಾ ಮತ್ತು ನೀನು ಸೇರಿಯೇ ಮಾಡ್ತೀರಿ ಅಂತ ಎದೆ ತಟ್ಟಿ ಹೇಳು' ಎಂದು ಅಜ್ಜಿ ಸ್ಫುಟವಾಗಿ ಹೇಳಿದಾಗ ಎಡವಟ್ಟು ಅನಿಸಿದರೂ ಏನೋ ಧೈರ್ಯವೂ ಬಂದಂತಾಗುತ್ತಿತ್ತು. ಪಾಪ, ತನಗೆ ಅಡಿಗೆ ಬರುವುದಿಲ್ಲ ಎಂಬ ಒಂದು ರೀತಿಯ ಸಣ್ಣ ವ್ಯಾಕುಲತೆ ಆಯಿಯನ್ನು ಸೂಕ್ಷ್ಮವಾಗಿಯೂ ಕಾಡದಂತೆ ಅಜ್ಜಿ ಮತ್ತು ಅಪ್ಪ ಎಷ್ಟು ಚೆನ್ನಾಗಿ ನಡೆದುಕೊಂಡರು. ಸಾರಿಗೆ ಉಪ್ಪು ಕಡಿಮೆ ಅಂತ ಹೆಂಡಂದಿರ ಕಪಾಳಕ್ಕೆ ಬಾರಿಸುವ, ರೊಟ್ಟಿ ತಣ್ಣಗಾಯ್ತು ಅಂತ ತಾಟನ್ನು ಎತ್ತೆಸೆಯುವ, ಬಡಿಸುವಾಗ ಅನ್ನ ಹೆಚ್ಚು ಬಿತ್ತು ಅಂತ ಕೂತಲ್ಲಿಂದಲೇ ಕಾಲೆತ್ತಿ ಕಣ್ಮುಚ್ಚಿ ಹೀನಾಯವಾಗಿ ಒದೆಯುವ ಗಂಡಭೇರುಂಡಗಳನ್ನು ಆಯಾ ಹೆಂಡಂದಿರು ಒಂದು ನಮೂನಿ ಅಸಹಾಯಕ ಹೆಮ್ಮೆಯಿಂದ ಎಂಬಂತೆ ಬಣ್ಣಿಸುವಾಗ ಛೀಮಾರಿ ಹಾಕಿ ಉರಿದೇಳುತ್ತಿದ್ದಳು ಅಜ್ಜಿ. 'ಆ ಗಂಡಂದಿರ ಒಳಗೇ ನರಕಾ ಇದೆ. ಒದ್ದಾಡ್ತಾ ಇರ್ತಾರೆ ಒಳಗೆ. ಅಹಂಕಾರದಿಂದ ವಿಲಿ ವಿಲಿ ವಿಲಿ. ಅವರು ಹಾಗೆ ಇರೋದ್ರಲ್ಲೇ ಅವರಿಗೆ ಶಿಕ್ಷೆ ಇದೆ. ಆಜನ್ಮ ಶಿಕ್ಷೆ ಅದು. ಸೊಪ್ಪು ಹಾಕಬೇಡ್ರಿ ಅದಕೆ' ಎಂದು ರೇಗಾಡುತ್ತಿದ್ದಳು. 'ಪೋಲಿಸ್ ಕಂಪ್ಲೇಂಟ್ ಕೊಡ್ರಿ' ಎಂತಿದ್ದಳು. ಅದಕ್ಕೆ ಮಂಗಳಾಬಾಯಿ ದೊಡ್ಡಕೆ ಗಹಗಹಿಸಿ ನಕ್ಕು 'ಬೆಲ್ಟ್‌ನಿಂದ ಅಹಲ್ಯಾಬಾಯಿಗೆ ಹೊಡೀತಾನಲ್ಲ ಗಂಡಾ, ಅವ ಪೋಲೀಸೇ!' ಎಂದಳು. ಹಠಾತ್ತನೆ ಅಜ್ಜಿಗೂ 'ಎಲಾ' ಎಂದು ನಗು ಬಂತು. ಎಲ್ಲರೂ ನಗ ತೊಡಗಿದರು.



ಹಸ್ತಾಕ್ಷರ ನಿತ್ಯ ಓಡಾಡುವ ಶಿವಾಜಿಪಾರ್ಕಿನ ಮೈದಾನದ ಪಕ್ಕದ ರಸ್ತೆ ಬದಿಯ ಪುಟ್ಟ ಗುಡಿಸಲಿನಲ್ಲಿದ್ದ ಗಂಡ ಹೆಂಡತಿ ಒಂದು ದಿನದಿಂದ ಮನೆ ಹೊರಗೇ ಸಣ್ಣ ಮೇಜಿನ ಮೇಲೆ ಸ್ಟೋವು ಕಾವಲಿ ಇಟ್ಟುಕೊಂಡು ಭಜಿ, ಬಟಾಟೆವಡೆ ಮಾಡಿ ಮಾರಲು ಆರಂಭಿಸಿದ್ದರು. ಅವರ ಮನೆಯ ನಿತ್ಯದ ಒಲೆಯೇ ಹೊರಗೆ ಬಂದಂತಿತ್ತು. ಪುಟ್ಟ ಮಗಳು ಮನೆಯಲ್ಲಿ ಆಡಿಕೊಂಡಿರುತ್ತಿದ್ದಳು. ಕೇಟರಿಂಗ್ ಕಾಲೇಜಿಗೆ ಅತಿ ಸಮೀಪವಿದ್ದುದರಿಂದ ಹಸ್ತಾಕ್ಷರ ಆಗಾಗ ಅಲ್ಲಿ ಹೋಗುತ್ತಿದ್ದ. ಗಂಡ ಬಾಬ್ಲಾ ರಸ್ತೆಯ ಮೇಲೆ ಹೋಗಿ ಬರುವವರ ಮೇಲೆ ಒಂದು ಕಣ್ಣಿಟ್ಟುಕೊಂಡೇ ಇರುತ್ತಿದ್ದ. ಹೆಂಡತಿ ಗೋಮತಿ ಮಾತ್ರ ಕಾವಲಿಯನ್ನೋ, ಒಲೆಯನ್ನೋ, ಹಿಟ್ಟನ್ನೋ ತದೇಕಚಿತ್ತಳಾಗಿ ನೋಡುತ್ತ ಕೆಲಸದಲ್ಲಿ ನಿರತಳಾಗಿರುತ್ತಿದ್ದಳು. ಬಾಬ್ಲಾ ಥೇಟರುಗಳಲ್ಲಿ ದೊಡ್ಡ ದೊಡ್ಡ ಪೋಸ್ಟರುಗಳನ್ನು ಬಿಡಿಸುತ್ತಿದ್ದನಂತೆ. ಕಂಪ್ಯೂಟರ್ ವಿನೈಲ್ ಪೋಸ್ಟರುಗಳು ಶುರುವಾದ ಮೇಲೆ ಆ ಕೆಲಸವೇ ಹೊರಟು ಹೋಯಿತು. ನಂತರ ಸಿನಿಮಾ ಮಂದಿರಗಳೂ ಒಂದೊಂದಾಗಿ ನಿಂತು ಹೋದವು. ಹೀಗಾಗಿ ಬಾಬ್ಲಾ ನಿರುದ್ಯೋಗಿಯಾದ. ಗೋಮತಿ ಟೊಂಕಕ್ಕೆ ಸೆರಗು ಕಟ್ಟಿ ಒಲೆಯನ್ನು ಹೊರಗೆ ತಂದೇ ಬಿಟ್ಟಳು. 'ಮಕ್ಕಳಿಗೆ ಡ್ರಾಯಿಂಗ್ ಕಲಿಸೂ ಅಂದ್ರೂ ಕಲಿಸುದಿಲ್ಲಾ' ಎಂದು ಬಾಬ್ಲಾನ ಮೇಲೆ ಅವಳ ತಕರಾರು. ಅದಕ್ಕೆ 'ಗಂಗಾ ಜಮುನಾ ಥೇಟರಿನಲ್ಲಿ 'ಡಾನ್' ಚಿತ್ರಕ್ಕಾಗಿ ಅಮಿತಾಬ್‌ನ ನೂರು ಅಡಿ ಎತ್ತರದ ಪೋಸ್ಟರ್ ಮಾಡಿದ್ದೆವು. ಎರಡು ತಿಂಗಳು ದುಡಿದಿದ್ದೆವು. ಅದರ ಮಜವೇ ಬೇರೆ. ಹತ್ತಿರದಿಂದ ಏನೂ ಗೊತ್ತಾಗುವುದಿಲ್ಲ. ಪುಟ್ಟ ಚೌಕಗಳಲ್ಲಿ ಸ್ಕೇಲು ಮಾಡಿಕೊಂಡು ತುಂಬುತ್ತ ಹೋಗಬೇಕು. ದೂರದಿಂದ ನೋಡಿದಾಗಲೇ ಅದು ಅಮಿತಾಬ. 'ಡಾನ್-ಟೂ' ಬಂದಾಗ ದುನಿಯಾನೇ ಬದಲಾಗಿಬಿಟ್ಟಿದೆ. ಎಲ್ಲಾ ವಿನೈಲ್ ಈಗ' ಎನ್ನುವ ಬಾಬ್ಲಾ ಕಳೆದ ಮಳೆಗಾಲದಲ್ಲಿ ಗೂಡು ಸೋರದಂತೆ ಒಂದು ಬಳಸಿ ಬಿಸಾಕಿದ ವಿನೈಲನ್ನೇ ಹೊದಿಸಿದ್ದಾನೆ.

ಯಾವುದೋ ಸಾಬೂನಿನ ಜಾಹಿರಾತು ಅದು. ಯಾರದೋ ವಶೀಲಿಯಿಂದ ಸಿಕ್ಕಿತು. ಒಮ್ಮೆ ಹಸ್ತಾಕ್ಷರ 'ಬೇರೆ ಯಾವುದಾದರೂ ಕೆಲಸಕ್ಕೆ ಸೇರಿಕೊಳ್ಳಿ. ಶಹರದಲ್ಲಿ ಕೆಲಸಕ್ಕೇನು ಕಮ್ಮಿ. ದೀದಿಯ ಭಜಿಯಿಂದ ಎಲ್ಲಾ ಹೇಗೆ ನಡೆದೀತು' ಎಂದು ತುಸು ಕಾಳಜಿಯಿಂದಲೇ ಕೇಳಿದಾಗ ಬಾಬ್ಲಾ ಸೂಕ್ಷ್ಮವಾಗಿ ಗಾಯಗೊಂಡವನಂತೆ 'ಕಲಾಕಾರ ನಾನು. ಇಜ್ಜತ್ ಕೊಡಿ. ಹುಲಿ ಉಪವಾಸ ಸತ್ತೀತು. ಆದರೆ ಹುಲ್ಲು ತಿನ್ನುವುದಿಲ್ಲ' ಎಂದ. ಕಲಾಕಾರ ಮತ್ತು ಇಜ್ಜತ್ ಇವೆರಡೂ ಪದಗಳೂ ಹತಾರವಾಗಿ ಕೇಳಿಸಿದವು. ಆಗ ಗೋಮತಿ ದೀದಿ 'ಹಾಗಾದರೆ ನಾವು ಉಳಿದವರು ಏನು ತಿನ್ನುವುದು?' ಎಂದು ಕೇಳಿದಳು. ಹಸ್ತಾಕ್ಷರನಿಗೆ ಏನೋ ಮುಜುಗರವಾಗಿ 'ಮಾಫ್

*PAGE DONATED BY :* ***AKADAS & FAMILY***

ಮಾಡಿ' ಎಂದ. ಅದಕ್ಕೆ ದೀದಿ 'ನೀವು ಬರೋಬರ್ ಮಾತಾಡಿದಿರಿ'. ಸಾಕಾಗಿ ಹೋಯ್ತು ನನಗೆ. ಇನ್ನೇನು ಸರಿ ಹೋಗ್ತದೆ ಅಂದುಕೊಳ್ತಾನೇ ಎಲ್ಲಾ ಮುಗೀಲಿಕ್ಕೆ ಬಂತಾ ಅನಿಸ್ತದೆ. ಎಷ್ಟು ಅಂತ ಏಗೋದು. ಯಾಕೆ ಅಂತ ಒದ್ದಾಡೋದು' ಎಂದಳು. ಅರ್ಧ ದಿನ ಅವಳು ಅಪಾರ್ಟ್‌ಮೆಂಟು, ಚಾಳುಗಳಲ್ಲಿ ಫಿನೈಲ್ ಬಾಟಲಿ ಮಾರಲೂ ಹೋಗುತ್ತಿದ್ದಳು. ಬಾಟಲಿಗೆ ಇಂತಿಷ್ಟು ಅಂತ ಕಮೀಷನ್ ಸಿಗುತ್ತಿತ್ತು. ಬಾಬ್ಲಾಗೆ ಅದು ಇಷ್ಟವಾಗುತ್ತಿರಲಿಲ್ಲ. ಹೀಗಾಗಿ ತುಂಬ ಕಲಹಗಳಾಗುತ್ತಿದ್ದವು. ಎದ್ದು ಹೊರಟು ಬಿಡುತ್ತಿದ್ದ. ಪ್ರಭಾದೇವಿ ಪಾರ್ಕಿನ ಮೈದಾನದ ಪಕ್ಕ ಸಿಮೆಂಟು ಬೆಂಚಿನಲ್ಲೋ ಅಥವಾ ಸಮುದ್ರ ತೀರದ ಕಟ್ಟೆಯ ಮೇಲೋ ಹೋಗಿ ಮಲಗುತ್ತಿದ್ದ. ದೀದಿ ಅವನನ್ನು ಹುಡುಕಿ ಹೋಗುವುದು ಇತ್ಯಾದಿ ರಂಪ ಮಾಡಿಕೊಳ್ಳುತ್ತಿರಲಿಲ್ಲ. ಒಂದು ದಿನ 'ಹೋಗುವುದೇ ಆದರೆ ನಾನೇ ಇಲ್ಲಿಂದ ಹೋಗುತ್ತೇನೆ' ಎಂದಳು. ಬಾಬ್ಲಾ 'ದುನಿಯಾ ನೋಡಿಲ್ಲ ನೀನು, ಫಿನೈಲ್ ಮಾರಲಿಕ್ಕೆ ಹೋದಂತಲ್ಲ ಅದು' ಎಂದು ಕುಹಕದಿಂದ ನಕ್ಕ. 'ಮಗಳನ್ನು ಬಿಟ್ಟು ಅವಳು ಖಂಡಿತ ಎಲ್ಲೂ ಹೋಗಲಾರಳು' ಎಂಬ ಭಂಡ ಭರವಸೆಯೂ ಆ ನಗುವಿನಲ್ಲಿ ಇತ್ತು. ತಾಪತ್ರಯ ಏನೇ ಇದ್ದರೂ ಅದಕ್ಕಾಗಿ ಮಕ್ಕಳನ್ನು ಅಡವಿಡಲಾಗದಂಥ ಗಾಢ ಪಾಶ ಮತ್ತು ನಂಬಿಕೆ ಎಷ್ಟೆಲ್ಲ ಸಂಸಾರಗಳನ್ನು ಇನ್ನೂ ಹೆಚ್ಚಿನ ಸಂಕಟದಿಂದ ಬಚಾವು ಮಾಡಿವೆ. ಆದರೆ ಅಲ್ಲೂ ಕೂಡ, ಭಾರವಾದ ವಸ್ತುವನ್ನು ಇಬ್ಬರು ಹೊತ್ತುಕೊಂಡು ಮೆಟ್ಟಲೇರುವಾಗ ಕೆಳಗಡೆ ಹೊತ್ತುಕೊಂಡವರ ಮೇಲೆಯೇ ಎಲ್ಲ ಭಾರವೂ ಬರುವಂತೆ ತಾಯಿಯ ಮೇಲೇ ಎಲ್ಲಾ ಒತ್ತಡ ಬರುತ್ತದೆ. ಕಲಹ ತಾರಕಕ್ಕೇರಿದಾಗ ಗೋಮತಿ 'ಫಿನೈಲ್ ಸ್ಟಾಕಿದೆ ಅಂತ ಕುಡೀತೇನೆ ಅಂತ ತಿಳೀಬೇಡ. ಬದುಕಿ ತೋರಿಸ್ತೇನೆ ನಿನಗೆ' ಎಂದು ಒಮ್ಮೆ ಅವಡುಗಚ್ಚಿ ಹೇಳಿದಳು. ಇಂಥವೆಲ್ಲ ಮನಸ್ತಾಪದ ನಂತರ ಮತ್ತೆ ಬೆಳಗಾದಾಗ ಎಲ್ಲ ಸುಳ್ಳೇ ಅನಿಸುವಂತೆ ಮಗಳನ್ನು ಶಾಲೆಗೆ ಒಯ್ಯಲು ಬಾಬ್ಲಾ ತಯಾರಾಗುತ್ತಿದ್ದ. ಸೀಮೆ ಎಣ್ಣೆ ಸ್ಟೋವಿನ ಮೇಲೆ ಗೋಮತಿ ಸ್ನಾನಕ್ಕೆ ನೀರು ಕುದಿಸುತ್ತಿದ್ದಳು. ಅವನು ಅರೆ ನಿದ್ದೆಗಣ್ಣಿನಲ್ಲಿ ಶರ್ಟಿನ ಗುಂಡಿಗಳನ್ನು ತಪ್ಪಿ ತಪ್ಪಿ ಹಾಕಿಕೊಂಡಿದ್ದನ್ನು ನೋಡಿ ತಾಯಿ ಮಗಳು ಇಬ್ಬರೂ ಬಿದ್ದು ಬಿದ್ದು ನಗುತ್ತಿದ್ದರು. ಅವನೂ ನಗುತ್ತಿದ್ದ. ಯಾವ ಉದ್ವಿಗ್ನತೆಯೂ ಅಲ್ಲಿರುತ್ತಿರಲಿಲ್ಲ. ಹೀಗೆ ಆ ಗುಡಿಸಲನ್ನು ಹಾಯುವಾಗೆಲ್ಲ ಹಸ್ತಾಕ್ಷರನಿಗೆ ವಿಚಿತ್ರ ಸಮಾಧಾನವಾಗುತ್ತಿತ್ತು. ಕೆಲಸ ಮುಗಿಸಿ ರೂಮಿಗೆ ಬಂದು ಮನೆ ಉಡುಪು ಹಾಕಿಕೊಂಡಾಗಿನ ಸಮಾಧಾನದಂತಿರುತ್ತಿತ್ತು ಅದು. ಮತ್ತು ಅದು ನಿಷ್ಕಾರಣವಾಗಿರುತ್ತಿತ್ತು.

ಹೀಗೇ ಒಂದು ದಿನ ಅಲ್ಲಿ ಹಾಯುವಾಗ ಹಸ್ತಾಕ್ಷರ ಬೆಚ್ಚಿಬಿದ್ದ. ಗುಡಿಸಲೇ ಅಲ್ಲಿರಲಿಲ್ಲ. ಎಷ್ಟೋ ವರುಷಗಳಿಂದ ಅಲ್ಲಿದ್ದ ಹತ್ತಾರು ಗುಡಿಸಲುಗಳ ಜೊತೆಗೆ ನಿರ್ನಾಮವಾಗಿತ್ತು. ಫುಟ್‌ಪಾತು ಸ್ವಚ್ಛವಾಗಿ ಬಯಲಿಗೆ ಬಿದ್ದಿತ್ತು. ಅನಾಥವಾದ ಒಂದು ಪ್ರಕಾಶ ಅಲ್ಲಿ ಕವಿದಂತಿತ್ತು. ಅಲ್ಲಿ ಹತ್ತು ಸಂಸಾರಗಳು ತಮ್ಮ ಮಕ್ಕಳು ಊಟ ಉಡುಪು ನಿದ್ದೆಗಳೊಂದಿಗೆ ಮನೆ ಮಾಡಿಕೊಂಡಿದ್ದವು ಎಂಬುದನ್ನು ನಂಬಲೇ ಆಗದಷ್ಟು ಆ ಜಾಗ ಸ್ವಚ್ಛವಾಗಿತ್ತು. ಬೆಳಕು ಆರಿ ಹತ್ತಿಕೊಳ್ಳುವಷ್ಟರಲ್ಲಿ ಮನೆ ಸೀನು ಹೋಗಿ ರಾಸ್ತಾಸೀನು ಬಂದಂತೆ. ಒಂದು ಮುರುಕು ಪ್ಲಾಸ್ಟಿಕ್ ಬಕೆಟ್ಟು ಸಹ ಅಲ್ಲಿ ಇರಲಿಲ್ಲ. ಬರೆದ ಮಗ್ಗಿಯನ್ನು ಅಳಿಸಿದ ಸ್ಲೇಟಿನಂತೆ ಆ ಫುಟ್‌ಪಾತು ತೆರವಾಗಿತ್ತು. ಜನ ಅದರ ಮೇಲೆ ನಡೆಯುತ್ತಿದ್ದರು. ಬಾಬ್ಲಾ, ಗೋಮತಿ ಮತ್ತು ಅವರಂಥ ಅಸಂಖ್ಯ ಅನಾಮಿಕರು ಮತ್ತೆಲ್ಲಿಂದ ತಮ್ಮ ಮಗ್ಗಿಯನ್ನು ಆರಂಭಿಸುತ್ತಾರೋ. ಮತ್ತೆಲ್ಲಿ ಸ್ನಾನಕ್ಕೆ ನೀರು ಕುದಿಸುತ್ತಾರೋ. ರಸ್ತೆಯಲ್ಲಿ ಸಹಸ್ರಾರು ಹೊಸ ವಾಹನಗಳು ಭರ್ರೋ ಎಂದು ಹಾಯುತ್ತಿದ್ದವು. ನಿಶ್ಚಲ ಮರಗಳಿಂದ ಎಲೆಗಳು ಕಂಪಿಸುತ್ತ ಬೀಳುತ್ತಿದ್ದವು. ಅವುಗಳಿಗೆ ಆಯ್ಕೆ ಇರಲಿಲ್ಲ. ಕೆಲವು ರಸ್ತೆಯ ನಡುವೆಯೇ ಬಿದ್ದರೆ ಕೆಲವು ಬದಿಯಲ್ಲಿ ಮಣ್ಣಿನಲ್ಲಿ ಬೀಳುತ್ತಿದ್ದವು. ಕೆಲವು ಫುಟ್‌ಪಾತಿನ ಮೇಲೆ ಬೀಳುವಾಗ ಬಿಸಿಲ ಕೋಲಿಗೆ ಸಿಕ್ಕಿ ಹೊಳೆಯುತ್ತಿದ್ದವು. ಏನೂ ತೋಚದಂತಾದ ಹಸ್ತಾಕ್ಷರ ಶಿವಾಜಿ ಪಾರ್ಕಿನ ಬೀಚಿಗೆ ಹೋದ.

ದಿನದ ಬೇರೆ ಬೇರೆ ಸಮಯದಲ್ಲಿ ಸಮುದ್ರ ಬೇರೆ ಬೇರೆ ಮಾತುಗಳನ್ನು ಆಡುತ್ತಿರುತ್ತದೆ. ಅಥವಾ ಅದರ ಮೌನವೇ ಬೇರೆ ಬೇರೆ ಬಣ್ಣಗಳಲ್ಲಿ ಹೊಳೆಯುತ್ತಿರುತ್ತದೆ. ಬಯಲು ಸೀಮೆಯವನಾದ ಹಸ್ತಾಕ್ಷರನಿಗೆ ಸಹಜವಾಗೇ ಸಮುದ್ರ ಯಾವತ್ತೂ ವಿಲಕ್ಷಣವಾದದ್ದನ್ನೇ ಉಕ್ಕಿಸುತಿತ್ತು. ಕೊನೆಯ ವಾಕ್ಯ ಮುಗಿದ ನಂತರದ ಖಾಲಿ ಹಾಳೆಯಂತೆ. ತಾನು ಕಥೆಯ ಕೊನೆಯ ಸಾಲಿನಲ್ಲಿ ಕೂತುಕೊಂಡು ಉಳಿದ ಖಾಲಿ ಜಾಗವನ್ನು ನೋಡುತ್ತಿದ್ದೇನೆ ಅನಿಸುತ್ತಿತ್ತು. ಚಪ್ಪಲಿ ಕೈಲಿ ಹಿಡಿದು ಪ್ಯಾಂಟು ತುಸು ಎತ್ತಿ ಮೆಲ್ಲಗೆ ಅಲೆಗಳಲ್ಲಿ ನಿಂತರೆ. ಅಂಗಾಲಿನಡಿಯಲ್ಲಿ ಮೆಲ್ಲಗೆ ಹುಸಿದು ಕರಗುತ್ತಿರುವಂತಿರುವ ಒದ್ದೆ ಉಸುಕಿನ ಸ್ಪರ್ಶ ಜೀವೋತ್ಕರ್ಷಕವೆನಿಸುತಿತ್ತು. ಗಾಣಗಾಪುರದ ನದಿಯಲ್ಲಿ ಬಟ್ಟೆ ಒಗೆಯುವಾಗ ಊರಿ ನಿಂತ ಕಾಲುಗಳನ್ನು ಮುದ್ದಿಸಿ ಪ್ರವಹಿಸಿದ ಧಾರೆಗೂ ಇದಕ್ಕೂ ಏನೋ ನಂಟಿತ್ತು. ಅಂಥ ಸಹಸ್ರಾರು ಧಾರೆಗಳನ್ನು ಉದರದಲ್ಲಿಟ್ಟುಕೊಂಡ ಸಮುದ್ರ. ಧ್ಯಾನದಂತೆ ಮಿರ್ಚಿ ಕರಿಯುತ್ತಿದ್ದ ಗೋಮತಿ ದೀದಿಯಂತೆ, ಅಗಣಿತ ಮಕ್ಕಳನ್ನು ಶಾಲೆಗೆ ದಫ್ತರಿನೊಂದಿಗೆ ತಲುಪಿಸುವ ಅಗಣಿತ ಬಾಬ್ಲಾರಂತೆ, ತಲೆಯ ಮೇಲೊಂದು ರೊಟ್ಟಿಯ ಪರ್ವತವನ್ನೇ ಹೊತ್ತುಕೊಂಡು ವಾರಕರಿಗಳ ಸೇವೆಗೆಂದು ಹೊರಟ ಆಯಿ ಚಂದಾ ತಾಯಿಯಂತೆ-ಎದುರಿತ್ತು. ಇಡೀ ಲೋಕದ ಬಟ್ಟೆಯನ್ನು ತೊಳೆಯಲೆಂದೇ ಕರಗಿಸಿಟ್ಟ ಸಾಬೂನಿನ ನೀರಿನಂತಿತ್ತು. ನೊರೆ ನೊರೆಯಾಗಿ ತೆರೆ ತೆರೆಯಾಗಿ ಆವರಿಸುತ್ತಿತ್ತು. ತನ್ನೊಳಗಿನ ಕಸಕಡ್ಡಿಗಳನ್ನು ತೀರಕ್ಕೆ ಒಕ್ಕುತಿತ್ತು. ಬಾಬ್ಲಾ ಮತ್ತು ದೀದಿ ಈಗ ಮತ್ತೆಲ್ಲಿ ತಮ್ಮ ಗೂಡಿಗಾಗಿ ಕಡ್ಡಿಗಳನ್ನು ಹೆಕ್ಕುತ್ತಿದ್ದಾರೋ! ಉಧ್ವಸ್ಥ ಸಮಯಗಳು ಅಪ್ಪಳಿಸುವುದೇ, ದುರ್ಬಲ ಪಾಶಗಳನ್ನು, ಹಿಡಿದ ಕೈಗಳನ್ನು ಇನ್ನೂ ಬಿಗಿಗೊಳಿಸುವುದಕ್ಕೆಂದೆ? ಹೇಗೆ ಕರಾರುವಕ್ಕಾಗಿ ಒಲೆಯ ಸುತ್ತ ಒಪ್ಪೊತ್ತಿನ ತುತ್ತಿಗೆ ಸಂಸಾರ ಒತ್ತಾಗಿ ಕೂರುತ್ತದೆ ಕುಕ್ಕರುಗಾಲಲ್ಲಿ. ಮಗಳ ಶಾಲೆಯ ದಫ್ತರಿಗಾಗಿ ಕಂಪಾಸು ಪೆಟ್ಟಿಗೆಯ ಪೆನ್ಸಿಲ್ಲನ್ನು ಶಾರ್ಪನರ್‌ನಿಂದ ಹೆರೆಯುವಂತೆ ಪ್ರತಿ ಜೀವನವನ್ನು ಹೆರೆಯುತ್ತದೆ ಬದುಕಿನ ವಾಂಛೆ. ಯಾವುದೋ ಸಿರಿವಂತ ತನ್ನ ದೇವ ಸೇವೆಯ ಅಂಗವಾಗಿ ಟೆಂಪೋದಲ್ಲಿ ಹಂಚುವ ಕೂಳಿಗಾಗಿನ ಸರತಿಯ ಸಾಲಿನಲ್ಲಿ ಮೊದಲ ಬಾರಿಗೆ ಸೇರಿಕೊಳ್ಳುವವರಿಗೆ ಘನತೆಯನ್ನೂ ಅದೇ ದಯಪಾಲಿಸುತ್ತದೆಯೇ? ಅವರು ಆಗ ಆ ಕಡೆ ಈ ಕಡೆ ರಸ್ತೆಯೆಡೆ ಎಲ್ಲೂ ನೋಡದೆ ಕೈಲಿರುವ ಪತ್ರಾವಳಿಯನ್ನೇ ನೋಡುತ್ತಾರೆ. ಆ ಸಾಲಿನಲ್ಲಿ ನಿಂತವರೆಲ್ಲರನ್ನೂ ಒಂದು ಅಕ್ಷಯ ಮೌನ ಬಂಧಿಸುತ್ತದೆ.

*(ಮುಂದುವರಿಯುವುದು)*

(ಸೌಜನ್ಯ : ಅನಾರಕಲಿಯ ಸೇಫ್ಟಿಪಿನ್)

*PAGE DONATED BY : **SHRI ROKESH HEGDE & FAMILY, DAHISAR***

# Inclusive Growth in India : Disappointing Experiences Looming Large

✍ **Dr. G. V. Joshi,** Former Professor and Chairman
Dept. of Economics, Mangalore University

*(Continued from last issue)*

**Old Problems Becoming More Challenging.**

Regardless of how poverty line was used by 2013 by the Planning Commission, it was clear that poverty remained a massive problem even before the pandemic (Asha Kapur Mehta et al 2019; B.S. Prakash 2012). In real life poverty has become much more stupendous and multidimensional (Atul Thakur, 2021).

As the Global Multi Poverty Index reported in 2019, India lifted 271 million citizens out of poverty and degradation between 2006-2016. The picture became drastically different later as has been reported by the Pew Research Centre. By applying the concept of purchasing power parity the Centre reported that the number of the poor people more than doubled---from 60 million to 134 million-just in a year of 2020-21. This only goes to show that after nearly 45 years, India is back in a state where it can be considered as a nation of mass poverty. A broad estimate reveals that now India is home to as much as one-fifth of the world population, with still more than one fifth of its population being poor in terms of poverty headcount ratio.

The bewildering rise in the magnitude of poverty is mainly the outcome of the rising magnitude of unemployment. By September 30, 2021, there was 8.8 million loss of salaried jobs as was reported by a veteran journalist Mahesh Vyas. In August 2021, 17 months after the draconian lockdown of April 2020 the aftermath of Covid 19, employment continued to remain lower than it was in 2019 -2020. In fact employment in August 2021 was 5.7 million lower than in 2019-20 and such lob losses are expected to create household stress. Many informal workers in urban areas turned to villages for eking out meager sustenance. What Dandekar said in 1993 in a special lecture in Mangalore University is resounding : "Agriculture has been treated as a parking lot for the poor" (Italics added).

In 2018 Oxfam India, an International Organisation of Human Rights, had reported that as much as 73 per cent of the wealth created in the country was appropriated by just 1% of the people who were extremely rich. Its executive officer Nisha Agarwal warned that shooting rise in the share in the national wealth of a very few billionaires and worsening condition of the masses was a clear indication of a major debacle, not an achievement in any sense (Quoted in Joshi, 2021).



Covid-19 has worsened the situation reducing the marginalized section of society's income share. The prolonged devastating impact of Covid-19 affected millions, and snatched their sources of livelihood. The circumstances are such that the Government of India has to adopt comprehensive macroeconomic policies that ameliorate inclusive growth and improve income distribution ( Rout and Muduli, 2021). Measures are deemed essential not to idealise the real, but to realize the ideal of inclusive growth now when the key segments of the poverty stricken economy are circumscribed by several failures, constraints and travails.

In her budget for 2021-2022, Union Finance Minister Nirmala Sitaraman, who exhibits her outstanding capacity to adore private sector(!), hardly mentioned the need for inclusive growth. She declared in ANNEXURE-III to the budget Privatisation or Disinvestment / Strategic Disinvestment Policy the chief objective of which is to minimize the presence of Central Public Sector Enterprises (CPSEs) including financial institutions and creating new investment space for private sector. Further she distinguished strategic sectors from non-strategic sectors. In strategic sectors (atomic energy, space, defense, transport and communications, power, petroleum etc) there will be bare minimum presence of the public sector enterprises. She also declared that in non-strategic sectors, CPSEs will be privatized, otherwise shall be closed ! This is in no way related to the dream of inclusive growth. The fact remains that even when growth was recovering in the wake of the second wave of Corona private investment was missing ( Saha, 2021).

Subsequently in August 2021, Nirmala announced that the government intends to hand over public assets such as railway stations, roads, oil and gas pipelines and power sector projects to operate on lease. This asset monetisation plan of Rs 6 lakh crore on a sustainable basis over a period of four years from the financial year of 2021-22 to finance infrastructure projects would hardly lead to inclusive growth because barring very few exceptions private sector undertakings in India have not exhibited public spirits. The predicament of Corporate Social Responsibility ( CSR) serves as the vivid instance to reveals the lack of social values of private sector in general.

To conclude, Inclusive growth in India should be taken to mean amelioration of the living condition of the vulnerable

*PAGE DONATED BY : **SHRI ANANT GANESH BHAT, BANDRA & FAMILY***

sections of the society through significant policy measures and not as welfare of all. Corona has strengthened forces which are inimical to the much needed process of inclusive growth. The federal structure now needs to be reviewed. The present Central Government is pursuing policies which induce us to infer that inclusive growth in India has fast become another forgotten empire that too at a time when it is really needed.

**Works cited**

Ali,Ifjal and Son, Hyun Hawa, ' Measuring Inclusive Growth', Asian Development Review,Vol.24, March 2007.

Dandekar, V.M. ' Limits of Credit- Not Credit Limits', C. N. Ramchandran et al (eds), Critical Spectrum, Mangalore University, Mangalagangotri, 1993.

Dollar, David and Aart Kray, ' Growth is Good for the Poor', Journal of Economic Growth, Vol.7, Issue 3, 2002.

Joshi G.V, ' Promoting Agricultural Tenancy Policy Measures in India and Elsewhere', Krishna Raj (ed.), Public Policy in India, Rawat Publications, New Delhi, 2021.

Joshi, G.V. and Krishna Prasad, ' Employment Generation for Poverty Alleviation and Human Development : Needed Redirections in Policies in India ' Nitte Management Review, Vol.8, Issue .1, July 2014.

Khan, M. V, 'For Real Inclusive Growth, Get rid of Corruption', The Hindu Business Line, March 10,2007.

Mukherjee, Pranab, The Presidential Years: 2012-2017, Rupa Publications, New Delhi, 2021.

Planning Commission (Former), Approach Paper to the Eleventh Five Year Plan, , New Delhi, 2006.

Rajan, M.A.S, Land Reforms in Karnataka: An Account by a Participant Observer, Hindusthan Publishing Corporation, New Delhi, 1986.

Raj, Krishna, 'Shadow of Poverty on India's Climate Goals', The Tribune, November 12, 2021.

Raju, B. Yerran, The Story of Indian MSMES: From Despair to Dawn of Hope, Konark Publicatios, New Delhi,2019.

Ramaswamy, K. V 'Public Policy for Inclusive and Spatial Disparities in India', Krishna Raj (ed), Public Policy in India, Rawat Publications, New Delhi, 2021.

Ranade, Ajit, 'As 2022 Approaches the Goal of Doubling Farm Incomes Remains Elusive ', Deccan Herald, August 11, 2021.

Rangarajan, C, ' Financial Inclusion : Some Key Issues, G. V. Joshi (ed), New Horizons of Banking and Finance, Corporation Bank Chair in Bank Management, Mangalore University, Mangalagangotri, 2008.

Ranaware, Krushna, et al 'MGNREGA Works and Their Impacts : A Study of Maharashtra ', Economic and Political Weekly, Vol. L, No. 13, March 28, 2015

Rout, Sanjay Kumar and Murali , Dilip Kumar, 'Income Inequality in India', Economic and Political Weekly, Vol.LVI, August 21, 2021.

Saha, Manojit, ' Growth Recovering but Private Investment Missing', Deccan Herald, March 8,2021.

Sarkar, Jayaanta, ' The Indian Economy ' , Pearson Education, New Delhi, 2007.

Shanmugasundaram, Yasodha, ' Expanding Frontiers of Economics: Issues and Challenges ' , The Indian Economic Journal, Vol. 52, No 3-4, March 2005.

Shetty N. S, 'Twelfth Five Year Plan : Development Challenges and Prospects ' P.G. Aquinas and Ashalatha (eds), Development Challenges in the 12th Five Year Plan, Justice K.S. Hegde Institute of Management, Nitte, 2012. ❍

*Courtesy : Invited article published in Al-Shodhana, a peer reviewed Journal of St. Alosius College, Autonomous, Mangalore, Vol. 9 No 2, July 2021, Pg. No. 14*

UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

***ADVT.***

# Seeing and Believing

✍ **L. V. Shastri, Bangalore**

Believing without seeing, generally, falls in the realm of blind belief. Blind beliefs are aplenty in our societies. However, it has to be said that blind beliefs are on their way out in the present era of science and technology and this augurs well for putting social order on a rational footing.

Everything that is believed without seeing can not be called blind belief, however. This is because there is an intellectual side, as much as the physical, to what all is presented as believable, or to be believed. Of course, present times offer virtual seeing. One may not be able to travel down to distant places to watch unusual things / events happening there. Still, one is able to watch them virtually in media like movies and electronic media and enjoy and believe in the specialty of that place. Thus, limitations on the physical side can be done away with. On the intellectual side, profound thoughts have emerged from bygone times in philosophy systems without the necessity of or recourse to seeing. Indian philosophy system would be the foremost among them.

Believing after seeing is the essential methodology in all branches of science, physical as well as life sciences. The seeing part is done with instruments - some very sophisticated - that are developed for the purpose. However, fundamental enquires and profound thoughts about topics like creation have come forth millennia ago, presumably without the aid of instruments. Yet, we can find good amount of overlap between the conclusions of philosophy systems and modern science. This is particularly the case with Indian Philosophy.

It is now common knowledge in science that there are constant vibrations in all forms of matter, from rocks to living cells. Atoms in a molecule keep vibrating about each other and the vibrations are considered the fingerprint of the molecule / the subject under study (spectroscopy). As we know, sound emanates from vibrations - of vocal chords in the chirping of birds, of strings in musical instruments and so on. It turns out that SOUND is given utmost importance, to the point of reverence, in Indian philosophy.

The sound from the syllable OM or AUM, called PRANAVA, is considered as the sound which was present at the time when universe got created - finger print of creation. This thought would be in the realm of believing without seeing. Interestingly, however, there are claims of recording the sound OM /AUM emanating from the Sun! (Circulated in social media).

The Vedas are so ancient that they are held as revealed scriptures - without any authorship of one or more persons. The sound from OM /AUM is given preeminent position in the Vedas. The perceptions in the philosophical thoughts of the Vedas are contained in the 'mantras'. Each of the four Vedas - Rig, Yajur, Sama and Atharva - prescribes its own unique way for uttering the 'mantras'. The importance given to vibrations created in their pronouncements and voice modulations would be implicit in such prescriptions.



The Vedic mantras contain all the basic thoughts of Indian philosophy. However, they are presented, more often, as prayers to different Gods and Goddesses that control different aspects of environment and also supervise our living on earth. Almost all the mantras, including the highly valued Gayatri Mantra, start with the utterance of OM / AUM. In the practice of meditation too, one is advised to bring his thoughts only on the Pranava.

It is firmly believed that the mantras contained in the Vedas were orally passed on from generation to generation. Very clever and efficient methodology was devised for remembering them. Five different ways called 'pathas' were thus devised and are followed to this day by the students of the Vedas. In a 'patha', words are repeated in a prescribed sequence that would greatly help in memorizing the lines in the mantras.

It has to be said that the experience while listening to the Vedic mantras, as uttered in the prescribed format, is unique indeed. The levels of happiness and enjoyment would be no less than those offered in musical concerts, orchestra etc.

In summary, science has 'seen' vibrations as one of the fundamental properties of matter. In modern cosmology, it is held that creation started with 'Big Bang'. The entity that was present before this event is thought to be a singularity with intense mass, heat and gravity. The observable cosmic microwave background (CMB) that pervades the universe is regarded as the finger print of the Big Bang. Indian philosophy system developed, presumably, without any recourse to physical instruments, has 'believed' in the preeminent position of vibrations symbolized in the utterance of OM /AUM. It won't be far fetched view to draw a parallel between CMB (a form of VIBRATION) and the vibration implicit in the utterance of OM / AUM. The OM /AUM of Indian philosophy can be said to be representative of the singularity of science. Indic philosophy calls the creator of the universe as Brahman. Utterance of OM /AUM can be regarded as representing the finger print (better still, one of the countless finger prints) of omnipresent Brahman! We, as Indians, can be very proud of our philosophy where one can find considerable overlap between what was 'believed' in it and what all is 'seen' in modern science. OM! ❍

*PAGE DONATED BY :* ***SMT. KALA BHAGWAT,*** **KHARGAR** ***IN MEMORY OF MOTHER LATE SMT. GOURI BHAT***

# ಪ್ರೀತಿ ಇಲ್ಲದೆ ಕಾಲೇಜು ಕಟ್ಟಲಾಗುವುದಿಲ್ಲ
# ಅಸಾಧಾರಣ ಪ್ರಾಂಶುಪಾಲ ದಿವೇಕರ ಕಾಲೇಜಿನ ಜಿ. ವಿ. ಭಟ್

✍ ಪ್ರೊ. ಆರ್. ಜಿ. ಹೆಗಡೆ

ಕಾರವಾರದ ದಿವೇಕರ ಕಾಲೇಜಿನ ಜಿ.ವಿ. ಭಟ್ ವಿದ್ಯಾರ್ಥಿಗಳ ಬಾಳು ಬೆಳಗಿಸಿದ ಪ್ರಾಂಶುಪಾಲರುಗಳಲ್ಲಿ ಒಬ್ಬರು. ಇಲ್ಲಿ ಒಂದು ವಿಷಯ ಹೇಳಬೇಕು. ಒಂದು ಶಿಕ್ಷಣ ಸಂಸ್ಥೆಯಲ್ಲಿ ಬರೀ 'ಪಾಠ ಪ್ರವಚನ' ನಡೆಯು ವುದಿಲ್ಲ. ಅದು ಒಂದು ಭಾಗ ಅಷ್ಟೇ. ಅಲ್ಲಿ ಮುಖ್ಯವಾಗಿ ನಡೆಯುವುದು ವಿದ್ಯಾರ್ಥಿಗಳನ್ನು ಕಟ್ಟುವ, ರೂಪಿಸುವ ಮನಶ್ಶಾಸ್ತ್ರೀಯ ಪ್ರಕ್ರಿಯೆ. ಅವೆಲ್ಲ ಹೇಗೆ ನಡೆಯುತ್ತವೆ, ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ಯಾರ ಅಥವಾ ಯಾವುದರ ಪ್ರಭಾವಕ್ಕೆ ಬರುತ್ತಾರೆ, ಹೇಗೆ ಬದಲಾಗುತ್ತಾರೆ ಇತ್ಯಾದಿಗಳನ್ನು ಗೆರೆ ಹಾಕಿ ಗಣಿತದಂತೆ ವಿವರಿಸಲಾಗುವುದಿಲ್ಲ. ಆದರೆ ಖಂಡಿತಕ್ಕೂ ಇಂತಹ ಪ್ರಕ್ರಿಯೆ ಅಲ್ಲಿ ಅದೃಶ್ಯವಾಗಿ ನಡೆಯುತ್ತಿರುತ್ತದೆ. ಒಮ್ಮೆ ಇದು ನಡೆಯದಿದ್ದರೆ ವಿದ್ಯಾರ್ಥಿಗಳಲ್ಲಿ ಅಥವಾ ಕಾಲೇಜಿನಲ್ಲಿ ದೋಷವಿದೆ ಎಂದು ಅರ್ಥ. ಇಂತಹ ಹಿನ್ನೆಲೆಯಲ್ಲಿಯೇ ಮೊದಲು ಕಾಲೇಜು ಆರಂಭವಾದ ಪ್ರದೇಶಗಳಲ್ಲಿನ ಜನ ಭಾರೀ ಪರಿವರ್ತನೆ ಹೊಂದಿ ಸಾಮಾಜಿಕ, ಆರ್ಥಿಕ ಪ್ರಗತಿ ಸಾಧಿಸಿರುವುದು. ಶಿಕ್ಷಣ ಸಂಸ್ಥೆಯೊಂದು ಸಾಮಾಜಿಕವಾಗಿ ಮಹತ್ವವಾಗುವುದು ಈ ಕಾರಣದಿಂದ. ಇನ್ಫೋಸಿಸ್ ಮಾನವ ಸಂಪನ್ಮೂಲ ವಿಭಾಗದ ಮೋಹನ್‌ದಾಸ್ ಪೈ ಹೇಳಿದಂತೆ ಕೆಟ್ಟ ಕಾಲೇಜು ಇರುವುದಕ್ಕಿಂತ ಕಾಲೇಜೇ ಇರದಿರುವದು ಒಳ್ಳೆಯದು. ಪ್ರಾಂಶುಪಾಲರ ವ್ಯಕ್ತಿತ್ವ ಬಹಳ ಮಹತ್ವವಾಗಿರುವುದು ಕೂಡ ಇದೇ ಕಾರಣಕ್ಕೆ. ಆ ವ್ಯಕ್ತಿತ್ವವೇ ಒಂದು ಪ್ರದೇಶಕ್ಕೆ ಇನ್‌ಸ್ಪಿರೇಶನಲ್ ನಾಯಕತ್ವ ನೀಡುವುದು ಮತ್ತು ಸುತ್ತಮುತ್ತಲ ಸಂಸ್ಕೃತಿಯನ್ನು ನಿರ್ಮಿಸುವುದು.



ಜಿ. ವಿ. ಭಟ್ ಅವರಿಗೆ ಇವೆಲ್ಲ ಗೊತ್ತಿದ್ದವು ಅನಿಸುತ್ತದೆ. ಹಾಗಾಗಿ ಅವರು ಕೇವಲ ದಿವೇಕರ ಕಾಲೇಜಿನ ಪ್ರಿನ್ಸಿಪಾಲರಾಗಿರಲಿಲ್ಲ. ಕಾರವಾರದ ಪ್ರಿನ್ಸಿಪಾಲರಾಗಿದ್ದರು. ಮತ್ತು ಕೇವಲ ಅಕಾಡೆಮಿಕ್ ಪ್ರಿನ್ಸಿಪಾಲರಾಗಿರಲಿಲ್ಲ. ಸಾಂಸ್ಕೃತಿಕ, ಸಾಮಾಜಿಕ ನಾಯಕರಾಗಿದ್ದರು. ಕಾರವಾರ ಅವರನ್ನು ಹಾಗೆ ಗೌರವಿಸುತ್ತಿತ್ತು. ಸಂಸ್ಥೆಯನ್ನು ಅಕ್ಷರಶಃ ಕಟ್ಟಿದವರು ಅವರು. ಜಿ. ವಿ. ಭಟ್ ಹೇಗಿದ್ದರೆಂದರೆ ಮುಂಬೈ, ಬೆಂಗಳೂರು ಅಂತಹ ಸ್ಥಳಗಳಿಗೆ ಹೋಗಿ ಅಲ್ಲಿನ ದಾನಿಗಳನ್ನು ಪುಸಲಾಯಿಸಿ ಕಾಲೇಜಿಗೆ ಹಣ ತರುತ್ತಿದ್ದರು. ಕಾರವಾರದಲ್ಲಿ ಯಕ್ಷಗಾನ ಇತ್ಯಾದಿಗಳನ್ನು ಆಯೋಜಿಸಿ ಸಾರ್ವಜನಿಕರಿಂದ ವಂತಿಗೆ ಸಂಗ್ರಹಿಸುತ್ತಿದ್ದರು. ವೈಯಕ್ತಿಕವಾಗಿ ಏನನ್ನೂ ಕೇಳದ ಅವರು ಕಾಲೇಜಿಗಾಗಿ ಕೇಳಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಹಣವನ್ನು ಚಿಕ್ಕಾಸು ವ್ಯರ್ಥವಾಗದಂತೆ ಬಳಸಿ ಸಂಸ್ಥೆಯನ್ನು ಕಟ್ಟಿದವರು ಅವರು (ಜಿ. ವಿ. ಭಟ್ ಕೆಲಸ ಮಾಡಲು ಸಾಧ್ಯವಾಗಿದ್ದಕ್ಕೆ ಸಂಸ್ಥೆಯ ಅಧ್ಯಕ್ಷರಾದ ಎಸ್. ಪಿ. ಕಾಮತ್ ಅವರ ಬೆಂಬಲ ವ್ಯಕ್ತಿತ್ವ ಕೂಡ ಕಾರಣ) ಮತ್ತೆ ಕಾಲೇಜು ಕಟ್ಟುವುದೆಂದರೆ ಕೇವಲ ಬಿಲ್ಡಿಂಗ್ ಕಟ್ಟುವುದು ಅಲ್ಲ ಎನ್ನುವುದು ಅವರಿಗೆ ಗೊತ್ತಿತ್ತು. ಅದಕ್ಕಾಗಿ ಅವರು ಕಾಲೇಜಿಗೆ ಪ್ರತಿಭಾವಂತ ಪ್ರಾಧ್ಯಾಪಕರನ್ನು ತಂದರು. ತಂದವರಿಗೆ ಸಾಣೆ ಹಿಡಿದರು. ಒಳ್ಳೆಯ ಪ್ರಾಧ್ಯಾಪಕರ ತಂಡ ಬೆಳೆಸಿದರು. ವಿದ್ಯಾರ್ಥಿಗಳ ವ್ಯಕ್ತಿತ್ವ ತಿದ್ದಿದರು. ದಿವೇಕರ ಕಾಲೇಜಿನಲ್ಲಿ ಸಾವಿರಗಟ್ಟಲೆ ವಿದ್ಯಾರ್ಥಿಗಳಿರುತ್ತಿದ್ದರು. ಬೆಳಿಗ್ಗೆ ಏಳೂ ಮುಕ್ಕಾಲರಿಂದ ಆರಂಭಿಸಿ ಸಾಯಂಕಾಲ ಐದು ಘಂಟೆಯವರೆಗೂ ಕಾಲೇಜನ್ನು ನಡೆಸಬೇಕಾಗುತ್ತಿತ್ತು. ಆದರೂ ಜಿ.ವಿ. ಭಟ್ ಅವರಿಗೆ ಪ್ರತಿಯೊಂದು ವಿದ್ಯಾರ್ಥಿಯ ಕುರಿತೂ ಗೊತ್ತಿರುತ್ತಿತ್ತು. ಆಗಾಧ ನೆನಪಿನ ಶಕ್ತಿ ಅವರದು. ಹೆಸರು ಹಿಡಿದು ಕರೆಯುತ್ತಿದ್ದರು. ಹಾಗೆಯೇ ಹಿಂದೆ ಬಂದು ಹೋದ ಎಲ್ಲ ವಿದ್ಯಾರ್ಥಿಗಳ ಹೆಸರು ಅವರ ನಾಲಿಗೆಯ ತುದಿಯಲ್ಲಿರುತ್ತಿತ್ತು. ಹೆಚ್ಚು ಕಡಿಮೆ ಇಡೀ ದಿನ ಅವರು ಕಾಲೇಜಿನಲ್ಲಿಯೇ ಇರುತ್ತಿದ್ದರು. ಸಾಯಂಕಾಲ ಒಂದು ವಾಕಿಂಗ್ ಮುಗಿಸಿ ಸುಮಾರು ಎಂಟು ಗಂಟೆಯ ಹೊತ್ತಿಗೆ ಮತ್ತೆ ಕಾಲೇಜಿನ ಎದುರು ಕುರ್ಚಿ ಹಾಕಿ ಕುಳಿತುಕೊಳ್ಳುತ್ತಿದ್ದರು. ಕಾಲೇಜಿನದ್ದೇ ಧ್ಯಾನ.



ತಮ್ಮ ಸಂಸ್ಥೆಯಲ್ಲಿರುವ ಸ್ಟಾಫ್‌ನ, ವಿದ್ಯಾರ್ಥಿಗಳ ಕ್ಯಾರೆಕ್ಟರ್ ಬಿಲ್ಡಿಂಗ್ ಬಗ್ಗೆ ಅವರಿಗಿದ್ದ ಅಪಾರ ಕಾಳಜಿ ಕುರಿತು ಹೇಳಬೇಕು. ಅವರಿಗೆ ಅಂತಹ ಕೌಶಲಗಳಿದ್ದವು, ವ್ಯಕ್ತಿತ್ವವಿತ್ತು. ಜನರ ನಿರ್ವಹಣೆಯಲ್ಲಿ ಅವರು ಎತ್ತಿದ ಕೈ. ಎದುರಿಗಿರುವ ವ್ಯಕ್ತಿಯ ಗುಣಗಳನ್ನು ಹೊಗಳುತ್ತ, ಹೊಗಳುತ್ತ, ತಮ್ಮ ತೆಕ್ಕೆಯೊಳಗೆ ತೆಗೆದುಕೊಂಡು ಆತನ ಮೇಲೆ ಅಪಾರ ಪ್ರಭಾವ ಬೀರಬಲ್ಲ ಸಾಮರ್ಥ್ಯ ಅವರಿಗಿತ್ತು. ಒಂದು ಚಿಕ್ಕ ಘಟನೆ ಹೇಳಬೇಕು. ನಾವು ಮೂರು ನಾಲ್ಕು ಗೆಳೆಯರು ಅಲ್ಲಿ ಕೆಲಸಕ್ಕೆ ಸೇರಿಕೊಂಡಾಗ ನಮಗೆ ಇಪ್ಪತ್ತಮೂರು ವರುಷ. ನಾವೆಲ್ಲರೂ ಒಳ್ಳೆ ಮಾರ್ಕ್ಸ್‌ಗಳ ಹಿನ್ನೆಲೆಯಿಂದ ಬಂದವರು, ಚುರುಕಾಗಿದ್ದವರು. ಆದರೆ ಹುಡುಗಾಟಿಕೆಯವರು. ಆ ವಯಸ್ಸಿನ ಹುಡುಗರ ಎಲ್ಲ ತೆವಲುಗಳೂ ನಮಗೆ ಚೂರು ಪಾರು ಇದ್ದವು. ಜಿ. ವಿ. ಭಟ್ ಹೇಗಿದ್ದರೆಂದರೆ ಅಂತಹ ದೊಡ್ಡ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರೂ, ಎಷ್ಟೇ ಬ್ಯೂಸಿ ಇದ್ದರೂ ಒಂದು ಕಣ್ಣು ನಮ್ಮ ಮೇಲೂ ಇತ್ತು. ಕಳ್ಳ ಕೆಲಸ ಮಾಡಲು ನೋಡುತ್ತಿದ್ದೆವು. ಆದರೆ ಎಷ್ಟು ಬುದ್ಧಿವಂತಿಕೆ ಮಾಡಿದರೂ ಕಳ್ಳ ಸಿಕ್ಕಿಬಿದ್ದೇ ಬೀಳುತ್ತಾನೆ ಎನ್ನುವುದಕ್ಕೆ ನಾವೇ ಸಾಕ್ಷಿ. ಒಂದು ರಾತ್ರಿ 'ಊಟ' ಮಾಡಿಬಿಟ್ಟಿದ್ದೆವು. ಆಮೇಲೆ ಸೈಕಲ್ ಹತ್ತಿ ಬೀಚ್‌ನ ಪಯಣ. ಅಲ್ಲಿ ಮಸ್ತಿ ಗದ್ದಲದಲ್ಲಿ ಗೆಳೆಯನೊಬ್ಬನ ಸೈಕಲ್‌ನ ಚಾವಿ ಮರಳಿನೊಳಗೆ ಎಲ್ಲೋ ಬಿದ್ದು ಹೋಗಿ ಬಿಟ್ಟಿತು. ನಾವೆಲ್ಲ ತಿರುಗಿ ಈ ಜಗತ್ತಿಗೆ ಬಂದ ಮೇಲೆಯೇ ಅರಿವಾಗಿದ್ದು, ಚಾವಿ ಕಳೆದು ಹೋಗಿದೆ ಎನ್ನುವುದು. ಈಗ ಒಬ್ಬ ಸೈಕಲ್ಲಿನ ಹ್ಯಾಂಡಲ್ ಹಿಡಿದು ನಡೆಸುತ್ತ ಮತ್ತೆ ಹಿಂದಿನ ಚಕ್ರವನ್ನು ಒಬ್ಬ ಎತ್ತಿ ಹಿಡಿದು ನಡೆಸುತ್ತಾ ಸುಮಾರು ಅರ್ಧ ಕಿಲೋಮೀಟರ್ ಸಾಗಿದ್ದೆವು. ನಡು ರಾತ್ರಿ ಪೊಲೀಸನೊಬ್ಬ ನಾವು ಸೈಕಲ್ ಕಳ್ಳತನ ಮಾಡುವವರು ಎಂದು ಭಾವಿಸಿ ನಮ್ಮನ್ನು ಹಿಡಿದುಬಿಟ್ಟ. ಗುರುತಿಸುವವರು ಇದ್ದರೆ ಹೇಳಿ ಬಿಡುತ್ತೇನೆ ಅಂದ. ಅನಿವಾರ್ಯವಾಗಿ ನಾವು ಭಟ್ಟರ ಕಾಲೇಜಿನಲ್ಲಿ ಲೆಕ್ಚರರ್‌ಗಳು ಎಂದು ಹೇಳಬೇಕಾಯಿತು, ಆತ ಬಿಟ್ಟ. ಆದರೆ ಆತ ಫೋನ್‌ನಲ್ಲಿ ಜಿ. ವಿ. ಭಟ್ಟರಿಗೆ ವಿಷಯ ತಿಳಿಸಿಬಿಟ್ಟಿದ್ದ. ಮರುದಿನ ಸಾಯಂಕಾಲ ಪ್ರಿನ್ಸಿಪಾಲರಿಂದ ಕರೆ ಬಂತು. ಆಗ ಅವರು ಹೇಳಿದ್ದು ಎಂದೆಂದೂ ಮರೆಯದ ಮಾತು. "ನೀವೆಲ್ಲರೂ ಬುದ್ಧಿವಂತ ಹುಡುಗರು. ದೊಡ್ಡ ಹುದ್ದೆಗಳಿಗೆ ಹೋಗಬಲ್ಲವರು. ಆದರೆ ಶಿಸ್ತು ಮತ್ತು ನೈತಿಕತೆ ಇಲ್ಲವಾದರೆ ನೀವು ಮಾಡಿದ್ದೆಲ್ಲ ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತಾಗುತ್ತದೆ. ಬರೇ ಬುದ್ಧಿವಂತಿಕೆಯಿಂದ ಜೀವನದಲ್ಲಿ ಮೇಲೆ ಹೋಗಲಾಗುವುದಿಲ್ಲ", ನಂತರ ನಾವು ತೆವಲುಗಳನ್ನು ಬಿಟ್ಟುಬಿಟ್ಟೆವು. ಜೀವನೋತ್ಸಾಹವನ್ನು ನಾನು ಕಲಿತಿದ್ದು ಅವರಿಂದ. ಅವರಿಗೆ ಜನರೆಂದರೆ ಪ್ರೀತಿ. ರುಚಿ ರುಚಿಯ ಖಾದ್ಯ ತಿನ್ನಿಸುವುದು ಬಹಳ ಪ್ರೀತಿ. ಸ್ವತಃ ತಾವು

*PAGE DONATED BY : **SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

ತಿನ್ನುತ್ತಿರಲಿಲ್ಲ. ನಮ್ಮನ್ನೆಲ್ಲ ಕರೆದು ಒತ್ತಾಯ ಮಾಡಿ ಹೊಟ್ಟೆಬಿರಿ ತಿನ್ನಿಸಿಬಿಡುತ್ತಿದ್ದರು. ಪಟ್ಟಾಂಗಕ್ಕೆ ಕುಳಿತರಂತೂ ಅವರನ್ನು ಮೀರಿಸುವವರಿರಲಿಲ್ಲ. ನಗುವಿನ ಹೊಳೆಯನ್ನೇ ಹರಿಸಿಬಿಡುತ್ತಿದ್ದರು. ಆದರೆ ಅನಂತರ ಗೊತ್ತಾಗಿದ್ದು ಇಂತಹ ಅವಕಾಶಗಳನ್ನೆಲ್ಲ ಮುಂದೆ ಇರುವವನನ್ನು ತಿದ್ದಲು, ದಾರಿಗೆ ತರಲು ಅವರು ಬಳಸುತ್ತಿದ್ದರು. ಹೀಗಾಗಿಯೇ ಸಾವಿರ ಹುಡುಗರು ಇದ್ದ ಕಾಲೇಜು ಅವರ ಮುಂದೆ ಶರಣಾಗಿ ಹೋಗುತ್ತಿತ್ತು. ಮತ್ತೆ ಅವರು ಬೇಸರದಲ್ಲಿ, ದುಃಖದಲ್ಲಿ ಕುಳಿತಿದ್ದನ್ನು ನೋಡಿಯೇ ಇಲ್ಲ. ಇಡೀ ದಿನ ಉತ್ಸಾಹದ ಬುಗ್ಗೆ. ಅವರು ಎಂತಹ ಪಾಸಿಟಿವ್ ವ್ಯಕ್ತಿಯಾಗಿದ್ದರು ಎಂದರೆ ಅದನ್ನು ಒಂದು ಉದಾಹರಣೆಯಿಂದಲೇ ಹೇಳಬೇಕು. ಅಟೆಂಡರ್ ಕಾಲೇಜಿನ ಕಾರಿಡಾರ್ ಅನ್ನು ಒಂದು ದಿನ ಸ್ವಚ್ಛ ಮಾಡಿರಲಿಲ್ಲ. ಅವನನ್ನು ಕರೆದು ಗದರಿಸಿದರು. ಅಟೆಂಡರ್ ಮುಖ ಸಣ್ಣಗೆ ಮಾಡಿ ನಿಂತ. ಹತ್ತಿರ ಕರೆದರು. ಆತ ಇನ್ನೂ ಕಂಗಾಲು. ಈಗ ಅವನ ಮುಖ ನೋಡಿ 'ಒಂದು ಸ್ಮೈಲ್ ಕೊಡು ನೋಡೋಣ' ಎಂದು ಹೇಳಿ ನಕ್ಕರು. ಆತನಿಗೆ ನಗು ತಡೆಯಲಾಗಲಿಲ್ಲ. ಆತ ಇಡೀ ದಿನ ನಗುತ್ತಲೇ ಇದ್ದ. ಜನರನ್ನು ಬಗ್ಗಿಸಲು, ಹತೋಟಿಯಲ್ಲಿಡಲು ಅವರು ಬಳಸುತ್ತಿದ್ದ ಆಯುಧ ಪ್ರೀತಿ, ಒಳ್ಳೆಯ ಮಾತು ಮತ್ತು ಉತ್ಸಾಹ, ಪ್ರೀತಿ ಇಲ್ಲದೆ ಕಾಲೇಜು ಕಟ್ಟಲಾಗುವುದಿಲ್ಲ.

ಅವರು ಮನಸ್ಸು ಮಾಡಿದ್ದರೆ ಏನು ಬೇಕಾದರೂ ಆಗಬಹುದಿತ್ತು. ಕುಲಪತಿಯಾಗಬಹುದಿತ್ತು. ಬ್ಯಾಂಕ್‌ಗಳ ಅಥವಾ ಕೈಗಾರಿಕೋದ್ಯಮಗಳ ಮುಖ್ಯಸ್ಥರಾಗಬಹುದಿತ್ತು. ಅಂತಹ ಸಾಮರ್ಥ್ಯ, ಸಂಪರ್ಕಗಳು ಎಲ್ಲವೂ ಇದ್ದವು. ಆದರೆ ಅವರು ಏನನ್ನೂ ಬಯಸಲೇ ಇಲ್ಲ. ಇಂದು ಜೀವನದ ಮುಸ್ಸಂಜೆಯಲ್ಲಿರುವ ಅವರಿಗೆ ಸಾವಿರದ ಶರಣು. ❍

(ಸೌಜನ್ಯ : ಕರಾವಳಿ ಮುಂಜಾವು, 19-5-2022)

## ಒಪ್ಪಂದ

**- ಶಾಂತಾ ಶಾಸ್ತ್ರಿ**

ಆ ಭಾನು ನಮಗಾಗಿದೆ
ಈ ಬಾನು ಬೆಳಕಾಗಿದೆ
ಚೈತನ್ಯ ತುಂಬಿ ತುಳುಕಿದೆ
ಜಗವೆಲ್ಲ ನಲಿದಾಡಿದೆ.

ಭಗವಂತನಿತ್ತ ಕಾಣಿಕೆ ಹಲವಾರಿದೆ
ಬಳಸುವ ಸೌಭಾಗ್ಯ ಹಿತವಾಗಿದೆ
ಬರಿದೆ ಸುಮ್ಮನೆ ಕಾದಾಡದೆ
ಬಹು ಅಮೂಲ್ಯ ಬಾಳಿದು ಅರಿಯಬೇಕಿದೆ.

ನಾನು ನನ್ನದೆಂಬ ದಾಹ ತೀರದಾಗಿದೆ
ತೀರದಿಂದ ಪ್ರೀತಿ ಪ್ರೇಮ ದೂರವಾಗಿದೆ
ತೀರಾ ಈ ತೀರಾ ಕಾಣದಾಗಿದೆ
ತೀರಿಕೊಳ್ವ ಭಾವ ಮನ ಮರೆತು ಬಿಟ್ಟಿದೆ.

ಭೂಮಿ ನಲುಗಿ ವರುಣ ಸುರಿದು ಪ್ರಳಯ ತೋರಿದೆ
ಮಹಾಯುದ್ಧ ದ್ವಯವು ಪಾಠ ಕಲಿಸಿದೆ
ಬೇನೆ ಕ್ಯಾನ್ಸರ್ ಕರೋನ ಪರಿತಪಿಸಿದೆ
ಜಾತಿ ಮತ ಮನು ಭೇದ ಮರೆಯಾಗದೆ.

ನೆಲೆ ನಿಂತ ಈ ನೆಲ ಸೊಂಪಾಗಿದೆ.
ದಾಹ ತಣಿಸೋ ಈ ಜಲ ತಂಪಾಗಿದೆ
ಉಸಿರು ನೀಡೊ ಗಾಳಿಯಲೆ ಇಂಪಾಗಿದೆ
ಸಬಲರೆಲ್ಲ ಅಬಲರನ್ನು ಸಲಹಬೇಕಿದೆ. ★



# ಜಾಗತೀಕರಣ ಮತ್ತು ಬದಲಾಗುತ್ತಿರುವ ನಮ್ಮ ಸಮಾಜ?

✍ ಶಾರದಾ ವಿಜಾಪುರೆ, ಡೊಂಬಿವಲಿ

ಜಾಗತೀಕರಣ ಮತ್ತು ಅದರಿಂದ ಸಮಾಜದಲ್ಲಾಗುತ್ತಿರುವ ಬದಲಾವಣೆ ಈ ವಿಷಯ ಇಂದು ಜಗತ್ತಿನಾದ್ಯಂತ ಬಹಳ ಚರ್ಚೆಗೊಳಪಟ್ಟ ವಿಷಯವಾಗಿದೆ. ಜಾಗತೀಕರಣವು ಹಿತವಾದದ್ದೋ ಅಥವಾ ಹಾನಿಕಾರಕವೋ ಎಂಬುದು ವಿಶ್ವದೆಲ್ಲೆಡೆ ಬಹು ಚರ್ಚಿತ ವಿಷಯ.

ಜಾಗತೀಕರಣದಿಂದಾಗಿ ಸಮಾಜದ ಮೇಲಾಗಿರುವ ಪರಿಣಾಮವನ್ನು ಚರ್ಚಿಸುವ ಮೊದಲು ಜಾಗತೀಕರಣದ ಪರಿಕಲ್ಪನೆಯನ್ನು ಅವಲೋಕಿಸೋಣ. ಜಾಗತೀಕರಣವನ್ನು ತೃಪ್ತಿಕರವಾಗಿ ವ್ಯಾಖ್ಯಾನಿಸುವುದು ತುಂಬ ಕಷ್ಟ. ಸರಳವಾಗಿ ಹೇಳಬೇಕೆಂದರೆ ಜಾಗತೀಕರಣ ಎಂದರೆ ಪ್ರಪಂಚವು ಚಿಕ್ಕದಾಗುತ್ತ ಹೋಗುತ್ತದೆ ಎಂದರ್ಥ. ಅಂದರೆ ವಿಶ್ವದ ರಾಷ್ಟ್ರಗಳೆಲ್ಲಾ ತಮ್ಮ ನಡುವಿನ ಗಡಿಗಳ ಅಂತರವನ್ನು ಕಡಿಮೆಮಾಡಿ ಹತ್ತಿರವಾಗುತ್ತಿವೆ. ಜಾಗತೀಕರಣದಿಂದಾಗಿ ದೂರ ಎಂಬ ಕಲ್ಪನೆ ದೂರವಾಗಿದೆ. ಜಾಗತೀಕರಣ ಒಂದು ಸಾಮಾಜಿಕ ವಿದ್ಯಮಾನ ಅಂದರೆ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಸಂಸ್ಕೃತಿಗಳ ಜಾಗತಿಕ ವಿಸ್ತರಣೆಯಾಗುತ್ತಿದೆ ಎಂದರ್ಥ. ಅಂತರ್ಜಾಲದಂತಹ ಮಾಹಿತಿ ಮೂಲಗಳಿಂದ ವಿಷಯಗಳ ವಿನಿಮಯದ ಏರಿಕೆಯಾಗುತ್ತದೆ. ಇಂದಿನ ದಿನಗಳಲ್ಲಿ ನಾವು ನಮ್ಮ ಮನೆಯಿಂದಲೇ ಜಗತ್ತಿನ ಯಾವುದೇ ಸ್ಥಳದಲ್ಲಿ ವಾಸಿಸುವರೊಂದಿಗೆ ಸಂವಹನ ನಡೆಸಲು ಸಾಧ್ಯವಾಗಿದೆ. ಜಾಗತಿಕ ನೆಟ್‌ವರ್ಕ್‌ನಿಂದಾಗಿ ಜಾಗತೀಕರಣವು ರಾಷ್ಟ್ರೀಯ ಗಡಿಗಳು ಎಂಬ ಸಂಕೋಲೆಯನ್ನು ದಾಟಿ 'ದೂರ'ವನ್ನು ಹತ್ತಿರವನ್ನಾಗಿ ಮಾಡಿದೆ. ಭೂಗೋಳದ ಎಲ್ಲಾ ರಾಷ್ಟ್ರಗಳೂ ಪರಸ್ಪರ ಸಂಬಂಧ ಹೊಂದುತ್ತಿವೆ. ಈ ಹಿಂದೆ ಭೌತಿಕವಾಗಿ ಹಾಗೂ ತಾಂತ್ರಿಕವಾಗಿ ಅಂತರದಿಂದ ಪ್ರತ್ಯೇಕಿಸಲ್ಪಟ್ಟ ಜಗತ್ತಿನ ದೇಶಗಳು ಜಾಗತೀಕರಣದಿಂದಾಗಿ ಹೆಚ್ಚೆಚ್ಚು ಪರಸ್ಪರ ಸಂಬಂಧ ಹೊಂದುತ್ತಿವೆ. ಕಲ್ಪನೆಗಳು, ಸರಕುಗಳು, ಸೇವೆಗಳು ಹೂಡಿಕೆಗಳು ಮುಂತಾದ ಪರಸ್ಪರ ಪ್ರಕ್ರಿಯೆಗಳು ಪ್ರಪಂಚದಾದ್ಯಂತ ಜನರ ನಡುವೆ ಹೆಚ್ಚಳವಾಗುತ್ತವೆ. ಕಳೆದ ಎರಡು ಮೂರು ದಶಮಾನಗಳಿಂದ ಜಾಗತೀಕರಣದಲ್ಲಿ ಭಾರಿ ಹೆಚ್ಚಳವಾಗುತ್ತಿದೆ. ಇದು ಮಾನವ ಸಮಾಜದಲ್ಲಿ ಎದ್ದಿರುವ ದೊಡ್ಡ ಅಲೆ.

ಇಂತಹ ಜಾಗತೀಕರಣವು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಅಲ್ಲದೆ ಪರಿಸರ ಹೀಗೆ ವಿಭಿನ್ನ ಕ್ಷೇತ್ರಗಳಲ್ಲಿ ಹರಡಿಕೊಂಡಿದೆ. ಹಾಗಾಗಿ ಇದು ಸಮಾಜದಲ್ಲಿ ಹಾಗೂ ದೇಶದಲ್ಲಿ ಧನಾತ್ಮಕವಾಗಿ ಹಾಗೂ ಋಣಾತ್ಮಕವಾಗಿ ಎರಡೂ ರೀತಿಯ ಬದಲಾವಣೆಯ ಅಂಶಗಳನ್ನು ಹೊಂದಿದೆ.

ವಾಸ್ತವವಾಗಿ ವ್ಯಾಪಾರ ಹಾಗೂ ಹಣಕಾಸು ಸಂಸ್ಥೆಗಳು ಜಾಗತೀಕರಣಕ್ಕೆ ದೊಡ್ಡ ಕೊಡುಗೆ ನೀಡಿವೆ. ಜಾಗತೀಕರಣವು ಜನರ, ಸಂಸ್ಥೆಗಳ, ಮಾರುಕಟ್ಟೆಗಳ ಮತ್ತು ರಾಷ್ಟ್ರಗಳ ನಡುವಿನ ಸಂಬಂಧವನ್ನು ವಿಸ್ತಾರಗೊಳಿಸಿದೆ. ವಿಶೇಷವಾಗಿ ಶ್ರೀಮಂತ ರಾಷ್ಟ್ರಗಳಾಗಿರುವ ಅಮೇರಿಕಾ ಮತ್ತು ಕೆಲವು ಯುರೋಪಿಯನ್ ದೇಶಗಳು ಜಾಗತೀಕರಣದ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುತ್ತಿವೆ.



ಜಾಗತೀಕರಣದಿಂದಾಗಿ ಕಂಪೆನಿಗಳಲ್ಲಿ ಸುಧಾರಿತ ನಿರ್ವಹಣಾ ಪದ್ಧತಿಗಳು ಪ್ರಸಾರವಾಗುವುದರಿಂದ ಉತ್ಪಾದನೆಯಲ್ಲಿ ಹೆಚ್ಚಳವಾಗುತ್ತಿದೆ. ಮಾರುಕಟ್ಟೆಯಲ್ಲಿ ಅಂತರಾಷ್ಟ್ರೀಯ ಹೂಡಿಕೆ ಮತ್ತು ಸಂಸ್ಥೆಗಳಲ್ಲಿ ವಿದೇಶಿ ಕಾರ್ಯತಂತ್ರಗಳ ಅಭಿವೃದ್ಧಿಯಾಗುತ್ತಿದೆ ಮತ್ತು ಬಲಗೊಳ್ಳುತ್ತಿದೆ. ಇದು ಸಮಾಜಕ್ಕೆ ಒಂದು ಒಳ್ಳೆಯ ವಿಚಾರ.

ಇನ್ನು ಕೆಲವು ಜನರ ವಿಚಾರಗಳಲ್ಲಿ ಜಾಗತೀಕರಣವು ಅಂತರ್ ರಾಷ್ಟ್ರೀಯ ಸ್ಪರ್ಧೆಗೆ ತೆರೆದುಕೊಳ್ಳುವ ಪರಿಣಾಮವಾಗಿ ಮಾರುಕಟ್ಟೆಗಳ ರಿಯಾಯಿತಿ ಹಾಗೂ ಉತ್ಪಾದಕ ವಸ್ತುಗಳ ಖಾಸಗೀಕರಣವಾಗುತ್ತದೆ. ಇದು ನಿರುದ್ಯೋಗಕ್ಕೆ ಕಾರಣವಾಗುತ್ತದೆ. ಅನಿಶ್ಚಿತ ಅಥವಾ ಸಾಂದರ್ಭಿಕ ಉದ್ಯೋಗಗಳನ್ನು ಹೆಚ್ಚಿಸುತ್ತದೆ. ಕಾರ್ಮಿಕ ಸಂಘಗಳನ್ನು ದುರ್ಬಲಗೊಳಿಸುತ್ತದೆ. ಕಂಪೆನಿ ಮಾಲೀಕರ ಅಧಿಕಾರಿ ಶಾಹಿತ್ವ ಹಾಗೂ ದರ್ಪ ಹೆಚ್ಚುತ್ತದೆ. ಕಾರ್ಮಿಕರ ಬೇಡಿಕೆಗಳಿಗೆ ಬೆಲೆ ಇರುವುದಿಲ್ಲ. ತಾಂತ್ರಿಕವಾಗಿ ಮುಂದಿರುವ ದೇಶಗಳು ಅನೇಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳೊಂದಿಗೆ ಸ್ಪರ್ಧಾತ್ಮಕವಾಗಲು ವೇತನವನ್ನು ಕಡಿಮೆಗೊಳಿಸುತ್ತವೆ ಎಂದು ಭಾವಿಸುವುದರಿಂದ ಜಾಗತೀಕರಣವು ಸಮಾಜದಲ್ಲಿ ಉದ್ಯೋಗ ನಷ್ಟ ಮತ್ತು ಆದಾಯ ನಷ್ಟದ ಭಯವನ್ನು ಹುಟ್ಟುಹಾಕಿದೆ. ಅಲ್ಲದೆ ಅನೇಕ ದೇಶಗಳು ತಮ್ಮ ಸಂಸ್ಕೃತಿಯನ್ನು ಮರೆತು ವಿದೇಶಿ ಸಂಸ್ಕೃತಿಯನ್ನು ಅನುಸರಿಸುತ್ತಿರುವುದರಿಂದ ಜಾಗತೀಕರಣವು ಸಮಾಜದಲ್ಲಿ ಸಂಸ್ಕೃತಿಯ ನಷ್ಟದ ಭಯವನ್ನೂ ಹುಟ್ಟುಹಾಕಿದೆ. ಕೆಲವೊಂದು ಇತಿಹಾಸದ ಪುಟಗಳಲ್ಲಿ ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವಿದೆ. ಜಾಗತೀಕರಣವು ಹೆಚ್ಚಿನ ಉದ್ಯೋಗ ಅವಕಾಶಗಳಿಗೆ ಅನುಕೂಲವಾಗಿರುವುದರಿಂದ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುತ್ತದೆ ಎಂಬ ಅಭಿಪ್ರಾಯವಿದೆ. ತ್ವರಿತ ತಾಂತ್ರಿಕ ಪ್ರಗತಿಯಿಂದಾಗಿ ಅನೇಕ ದೇಶಗಳ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಅಲ್ಲದೆ ಧಾರ್ಮಿಕ ಜೀವನದ ಮೇಲೆ ಭಾರೀ ಪರಿಣಾಮ ಬೀರುತ್ತಿದೆ ಎಂಬ ಅಭಿಪ್ರಾಯವೂ ಇದೆ. ಜಾಗತೀಕರಣದ ಬಗ್ಗೆ ಇಂಥ ಒಂದು ಸಂಘರ್ಷದ ದೃಷ್ಟಿಕೋನಗಳು ಇವೆ.

ಇನ್ನು ಭಾರತದಲ್ಲಿ ಜಾಗತೀಕರಣದ ಪ್ರಭಾವ ಹಾಗೂ ಪರಿಣಾಮವನ್ನು ನೋಡುವಾ. ಇಂದು ಭಾರತ ದೇಶವು ಜಾಗತೀಕರಣದ ಮುಖ್ಯವಾಹಿನಿಯಲ್ಲಿದೆ. ಜಾಗತೀಕರಣವು ವಿಶ್ವಸಂವಹನ, ವಿಜ್ಞಾನ ಹಾಗೂ ತಂತ್ರಜ್ಞಾನಗಳಿಂದಾಗಿ ಹೊಸ ಹೊಸ ಯೋಜನೆಗಳಿಗೆ ಕಾರಣವಾಗಿದೆ. ಇಂದು ಭಾರತದಲ್ಲಿ ನೇರ ವಿದೇಶಿ ಹೂಡಿಕೆಗೆ ವಿಪುಲ ಅವಕಾಶವಿದೆ. ಹಾಗಾಗಿ ಭಾರತದಲ್ಲಿ ಉದ್ಯಮದ ಹೆಚ್ಚಳವಾಗುತ್ತಿದೆ. ಭಾರತದಲ್ಲಿ ಅನೇಕ ಬಿ.ಪಿ.ಓ. ಹಾಗೂ ಎಮ್.ಎನ್.ಸಿ.ಗಳು ತೆರೆದಿವೆ. ಅನೇಕ ವಿದೇಶಿ ಕಂಪೆನಿಗಳು ರಾಸಾಯನಿಕ, ಔಷಧೀಯ, ಸಾರಿಗೆ ಹಾಗೂ ಉತ್ಪಾದನೆಯಂಥ ಅನೇಕ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿವೆ. ಇದರಿಂದ ಭಾರತೀಯರಿಗೆ ಉದ್ಯೋಗವಕಾಶವಾಗಿ ಸ್ವಲ್ಪ ಮಟ್ಟಿಗೆ ನಿರುದ್ಯೋಗ ಹಾಗೂ ಬಡತನವನ್ನು ಕಡಿಮೆ ಮಾಡಿದೆ. (ಈಗ ಕೊರೊನಾ ಹಾಗೂ

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

ಲಾಕ್‌ಡೌನ್‌ನಿಂದಾಗಿ ಬಡತನ ಹಾಗೂ ನಿರುದ್ಯೋಗ ಹೆಚ್ಚಾಗಿದೆ ಎಂದು ಹೇಳುತ್ತಾರೆ). ಇಂದು ಭಾರತದಲ್ಲಿ ಮೂಲ ಸೌಕರ್ಯಗಳು, ವಿದ್ಯುತ್ತಿನ ಲಭ್ಯತೆ, ಸೇತುವೆಗಳು, ಆಣೆಕಟ್ಟುಗಳು, ರಸ್ತೆಗಳು, ರೈಲ್ವೆಗಳು ಇವುಗಳೆಲ್ಲೆಲ್ಲಾ ತುಂಬಾ ಅಭಿವೃದ್ಧಿಯಾಗುತ್ತಿದೆ.

ಆದರೆ ಇಂದು ಭಾರತದ ಪ್ರತಿಭಾವಂತ ಯುವಕ-ಯುವತಿಯರು ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. (ಪ್ರತಿಭಾ ಪಲಾಯನವಾಗುತ್ತಿದೆ) ದುಃಖದ ಸಂಗತಿಯೆಂದರೆ ಆ ದೇಶಗಳು ನಮ್ಮ ಭಾರತದ ಪ್ರತಿಭಾವಂತ ಮಾನವ ಸಂಪನ್ಮೂಲವನ್ನು ಕಡಿಮೆವೆಚ್ಚ ಹಾಗೂ ವೇತನದಲ್ಲಿ ಉಪಯೋಗಿಸಿಕೊಂಡು ಲಾಭ ಪಡೆದುಕೊಳ್ಳುತ್ತಿವೆ.

ಭಾರತದಲ್ಲಿ ಸಣ್ಣ ಹಾಗೂ ಮಧ್ಯಮ ವರ್ಗದ ಉದ್ಯಮಗಳಿಗೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜಾಗತೀಕರಣದಿಂದ ಅಷ್ಟೊಂದು ಉಪಯೋಗ ಆಗುತ್ತಿಲ್ಲವೆಂದು ನನಗೆ ಅನಿಸುತ್ತದೆ. ಜಾಗತೀಕರಣವು ಭಾರತದಲ್ಲಿ ಆಮದು ಮತ್ತು ರಫ್ತು ಚಟುವಟಿಕೆಗಳ ಮೇಲೆ ತುಂಬಾ ಪರಿಣಾಮ ಬೀರಿದೆ. ಭಾರತದ ಕೃಷಿ ಉತ್ಪನ್ನಗಳು, ಸಮುದ್ರ ಉತ್ಪನ್ನಗಳು, ಆಹಾರ ಪದಾರ್ಥಗಳು, ಪಾನೀಯಗಳು, ಕ್ರೀಡಾ ಉಡುಪುಗಳು ಇವೆಲ್ಲಾ ಇಂದು ಜಾಗತಿಕ ಮಟ್ಟದಲ್ಲಿ ಪ್ರಸಿದ್ಧವಾಗಿವೆ. ಜಾಗತೀಕರಣದಿಂದಾಗಿ ಇವುಗಳ ರಫ್ತು ವ್ಯಾಪಾರ ವೇಗವನ್ನು ಹೆಚ್ಚಿಸಿಕೊಂಡಿದೆ. ಭಾರತದ ಅರಣ್ಯಗಳಲ್ಲಿ ಲಭ್ಯವಿರುವ ಔಷಧೀಯ ಸಸ್ಯಗಳು, ಪೌಷ್ಟಿಕವಾದ ಆಹಾರಗಳಾದ ಸಿರಿಧಾನ್ಯಗಳು, ಹಣ್ಣುಗಳು, ಚಹ, ಕಾಫಿ, ಎಣ್ಣೆಬೀಜಗಳು ಇವುಗಳಿಗೆಲ್ಲ ಇಂದು ಜಗತ್ತಿನಲ್ಲಿ ಬೇಡಿಕೆ ಹೆಚ್ಚುತ್ತಿದೆ. ಅಲ್ಲದೆ ಭಾರತೀಯ ಶಿಕ್ಷಣ ಕ್ಷೇತ್ರದಲ್ಲಿ ಜಾಗತೀಕರಣದ ಕೊಡುಗೆ ದೊಡ್ಡದಿದೆ. ಸಮಾಜದಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚುತ್ತಿದೆ. ವಿದೇಶಿ ವಿದ್ಯಾಲಯಗಳ ಹಾಗೂ ಭಾರತೀಯ ವಿದ್ಯಾಲಯಗಳ ಪರಸ್ಪರ ಸಹಕಾರ ಹೆಚ್ಚಾಗಿದೆ. ದೂರ ಶಿಕ್ಷಣ, ಸಾಗರೋತ್ತರ ತರಬೇತಿ, ಇ-ಲರ್ನಿಂಗ್‌ದಂತಹ ಹೊಸ ವಿಧಾನಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಹುಟ್ಟಿಕೊಂಡಿವೆ. ಜಾಗತೀಕರಣದ ಪ್ರಭಾವದಿಂದಾಗಿ ವಿಜ್ಞಾನ, ಖಗೋಳ ಶಾಸ್ತ್ರ, ಆಕಾಶಕಾಯಗಳ ಸಂಶೋಧನೆ, ವೈದ್ಯಕೀಯ ಶಾಸ್ತ್ರ ಅಲ್ಲದೆ ಮೂರೂ ಸೇನಾ ವಾಹಿನಿಗಳು ಇಂಥ ಕ್ಷೇತ್ರಗಳಲ್ಲಿ ಗಣನೀಯವಾಗಿ ಅಭಿವೃದ್ಧಿ ಹೊಂದಿ, ಇಂದು ಭಾರತವು ಜಗತ್ತಿನ ಮುಂದುವರಿದ ರಾಷ್ಟ್ರಗಳೊಂದಿಗೆ ಸರಿಸಮನಾಗಿ ಸಾಗುತ್ತಿದೆ. ಅಲ್ಲದೆ ವಿದೇಶಿ ಹೂಡಿಕೆ, ಆಮದು, ರಫ್ತು, ವ್ಯಾಪಾರಗಳ ಹೆಚ್ಚಳ ಇವೆಲ್ಲ ಭಾರತ ಒಟ್ಟೂ ದೇಶಿಯ ಉತ್ಪನ್ನದ (ಜಿ.ಡಿ.ಪಿ.) ದರವನ್ನು ಹೆಚ್ಚಿಸಿ, ಜಾಗತಿಕ ಮಟ್ಟದಲ್ಲಿ ಭಾರತವು ಉತ್ತಮ ಸ್ಥಾನವನ್ನು ಗಳಿಸುವಲ್ಲಿ ಸಹಕಾರಿಯಾಗಿದೆ.

ಜಾಗತೀಕರಣದಿಂದ ಮಹಿಳಾ ಸಬಲೀಕರಣವಾಗುತ್ತಿದೆ. ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಪಡೆದು ಕೊಳ್ಳುತ್ತಿದ್ದಾರೆ. ದೇಶದಲ್ಲಿ ಹಾಗೂ ವಿಶ್ವದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಉತ್ತಮ ಸ್ಥಾನಮಾನ ಗಿಟ್ಟಿಸಿಕೊಳ್ಳುತ್ತಿದ್ದಾರೆ.

ಇನ್ನು ಜಾಗತೀಕರಣದ ಮುಖ್ಯ ಋಣಾತ್ಮಕ ಅಂಶವೆಂದರೆ ಮುಖ್ಯವಾಗಿ ಭಯೋತ್ಪಾದನೆ. ಈ ಅಂತರ್ಜಾಲದಿಂದಾಗಿ ಭಯೋತ್ಪಾದಕರು ವಿಶ್ವದಲ್ಲಿ ತಮ್ಮ ಜಾಲವನ್ನು ಹರಡಿಕೊಳ್ಳಲು ಅನುಕೂಲವಾಗಿ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚುತ್ತಿವೆ. ಇದರಿಂದ ಜಗತ್ತಿನಲ್ಲಿ, ದೇಶಗಳಲ್ಲಿ ಹಾಗೂ ಸಮಾಜದಲ್ಲಿ ಭಯ ಬೆದರಿಕೆಗಳು ಉಂಟಾಗಿವೆ. ಅದೇ ರೀತಿಯಾಗಿ, ಸಮೂಹ ಮಾಧ್ಯಮಗಳ ಮೇಲೂ ಜಾಗತೀಕರಣವು ಪ್ರತಿಕೂಲ ಪರಿಣಾಮ ಬೀರಿದೆ. ಮಾಧ್ಯಮಗಳು ಪ್ರಸ್ತುತ ಘಟನೆಗಳ ಮತ್ತು ನಡೆಯುತ್ತಿರುವಂಥ ಸತ್ಯ ಹಾಗೂ ವಾಸ್ತವಿಕ ವಿಚಾರಗಳನ್ನಷ್ಟೇ ಪ್ರಸಾರ ಮಾಡದೆ, ಕೆಲವೊಮ್ಮೆ ಅವು ಅತಿರೇಕದ ಪರಾಕಾಷ್ಠೆಯನ್ನು ತಲುಪುತ್ತವೆ. ಇದರಿಂದ ಇಂದು ಮಾಧ್ಯಮಗಳಲ್ಲಿ ಪ್ರಸಾರವಾಗುವ ಬಹಳಷ್ಟು ವಿಷಯಗಳು ವಿಶ್ವಾಸಕ್ಕೆ ಅರ್ಹವೋ, ಅಲ್ಲವೋ ಎಂದು ಯೋಚಿಸಬೇಕಾಗುತ್ತದೆ.


ಜಾಗತೀಕರಣದ ಪರಿಣಾಮವಾಗಿ ಮಾರುಕಟ್ಟೆಗಳಲ್ಲಿ ದೇಶೀ ವಸ್ತುಗಳಿಗಿಂತ ವಿದೇಶಿ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಚೈನಾದಲ್ಲಿ ತಯಾರಾಗುವ ವಸ್ತುಗಳಿಗೆ ಭಾರತವೇ ದೊಡ್ಡ ಮಾರುಕಟ್ಟೆ. (ಈಗೀಗ ನಮ್ಮ ಸರಕಾರ ಸ್ವಲ್ಪ ನಿರ್ಬಂಧ ಹೇರುತ್ತಿದೆ). ಇಂದು ಕಂಪೆನಿಗಳಲ್ಲಿ ದೇಶದ ಜನರಿಗಿಂತ ವಿದೇಶಿಗರ ಒಲವನ್ನು ಲಕ್ಷದಲ್ಲಿಟ್ಟುಕೊಂಡು ಸರಕುಗಳು ಉತ್ಪಾದನೆಯಾಗುತ್ತಿದೆ.

ಜಾಗತೀಕರಣದ ಇಂದಿನ ದಿನಗಳಲ್ಲಿ ಭಾರತದಲ್ಲಿ ಯುವಕ-ಯುವತಿಯರು ವೇಗವಾಗಿ ಹಣ ಸಂಪಾದಿಸುವ ಮಾರ್ಗವನ್ನು ಅನುಸರಿಸಿ ಸಾಮಾಜಿಕ ಜೀವನವನ್ನು ಕೆಡಿಸಿಕೊಳ್ಳುತ್ತಿದ್ದಾರೋ ಎನಿಸುತ್ತಿದೆ. ಅಲ್ಲದೆ ಜಾಗತೀಕರಣವು ಭಾರತೀಯರ ವೈವಾಹಿಕ ಜೀವನ ಹಾಗೂ ಧಾರ್ಮಿಕ ನಂಬಿಕೆಗಳ ಮೇಲೂ ವಿಪರೀತ ಪರಿಣಾಮ ಬೀರುತ್ತಿದೆ. ವಿವಾಹ ವಿಚ್ಛೇದನಗಳು ಸಮಾಜದಲ್ಲಿ ಹೆಚ್ಚುತ್ತಿವೆ. ನೈತಿಕತೆ ಕುಸಿಯುತ್ತಿದೆ. ಜನರಲ್ಲಿ ನಾಸ್ತಿಕತೆ ಆವರಿಸಿಕೊಳ್ಳುತ್ತಿದೆ. ಭಾರತದ ಸನಾತನ ಧರ್ಮದಲ್ಲಿ ನಂಬಿಕೆ, ವಿಶ್ವಾಸಗಳು ಕಡಿಮೆಯಾಗಿ ಕೆಲವು ಜನರಿಂದ ಧರ್ಮದ ಅವಹೇಳನವಾಗುತ್ತಿದೆ. ಆದರೆ ಅದೇ ಧರ್ಮ ವಿದೇಶಗಳಲ್ಲಿ ಪ್ರಿಯವಾಗುತ್ತಿದೆ. ಮತ್ತು ಭಾರತೀಯ ಧರ್ಮ ಗ್ರಂಥಗಳ ಅಭ್ಯಾಸ ಮತ್ತು ಸಂಶೋಧನೆ ವಿದೇಶಗಳಲ್ಲಿ ಹೆಚ್ಚುತ್ತಿದೆ. ಅಂತರ್ಜಾಲದ ಅತಿರೇಕದ ಬಳಕೆಯಿಂದಾಗಿ ದೊಡ್ಡವರು, ಯುವಕರು, ಮಕ್ಕಳಾದಿಯಾಗಿ ಅನೇಕರು ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ. ಮಹಿಳೆಯರ ಮೇಲೆ ಸಾಮೂಹಿಕ ಬಲಾತ್ಕಾರದಂಥ ದುಷ್ಕೃತ್ಯಗಳು ಹೆಚ್ಚಾಗಿವೆ. ಹಿಂದೆ ಕೇಳರಿಯದಂಥ 'ಖಿನ್ನತೆ' ಎಂಬ ವ್ಯಾಧಿಗೆ ಜನರು ತುತ್ತಾಗುತ್ತಿದ್ದಾರೆ ಮತ್ತು ಈ ವ್ಯಾಧಿಯಿಂದಾಗಿ ಹೆಚ್ಚಾಗಿ ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬುದು ನಿಜವಾಗಿಯೂ ಖೇದದ ವಿಷಯ. ಪರಿಸರದ ಮೇಲೂ ಜಾಗತೀಕರಣದ ಪ್ರಭಾವ ಉಂಟಾಗಿದೆ. ನೈಸರ್ಗಿಕ ಸಂಪನ್ಮೂಲಗಳ ಹಾಗೂ ಖನಿಜ ಸಂಪನ್ಮೂಲಗಳ ದುರ್ಬಳಕೆಯಾಗುತ್ತಿದೆ.

ಒಟ್ಟಿನಲ್ಲಿ ಹೇಳುವುದಾದರೆ ಜಾಗತೀಕರಣವು ಭಾರತದಲ್ಲಿ ಮಾತ್ರವಲ್ಲ ಇಡೀ ವಿಶ್ವದಾದ್ಯಂತ ಜನರ ಜೀವನವನ್ನು ಬದಲಾಯಿಸಿದೆ. ಜಾಗತೀಕರಣವು ಧನಾತ್ಮಕವಾಗಿ ಬಹಳಷ್ಟು ಹಾಗೂ ಋಣಾತ್ಮಕವಾಗಿಯೂ ಕೆಲವೊಂದು ಅಂಶಗಳಿಂದ ಸಮಾಜದ ಮೇಲೆ ಪರಿಣಾಮ ಬೀರಿದೆ. ಜನರು ಧನಾತ್ಮಕ ಅಂಶಗಳ ಪ್ರಯೋಜನ ಪಡೆದು ಋಣಾತ್ಮಕ ಅಂಶಗಳನ್ನು ಪ್ರಯತ್ನಪೂರ್ವಕವಾಗಿ ಇಲ್ಲವಾಗಿಸಬೇಕು. ಅಂದಾಗ ಸ್ವಾಸ್ಥ್ಯಪೂರ್ಣವಾದ ಸಮಾಜವನ್ನು ಕಟ್ಟಲು ಸಾಧ್ಯ. ಭಾರತದ ಇಂದಿನ ಸರಕಾರವು ಅನೇಕ ಮಹತ್ವಾಕಾಂಕ್ಷೆಯ ಸುಧಾರಣಾ ಕಾರ್ಯಕ್ರಮವನ್ನು ಅಳವಡಿಸಿಕೊಂಡಿದೆ. ಅಲ್ಲದೆ ಅನೇಕ ದಿಟ್ಟ ನಿರ್ಣಯಗಳನ್ನು ತೆಗೆದುಕೊಂಡಿದೆ. ಅವೆಲ್ಲ ಕಾರ್ಯರೂಪಕ್ಕೆ ಬರಲಿ ಹಾಗೂ ಭಾರತವು ಆರ್ಥಿಕ ಹಾಗೂ ಮಾನವ ಅಭಿವೃದ್ಧಿಯಲ್ಲಿ ಐತಿಹಾಸಿಕ ಹೆಜ್ಜೆ ಇಡುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ. ❍

*PAGE DONATED BY : **SHRI A. K. BHAT, CHITRIGI & FAMILY***

# Book Review




| | | |
|---|---|---|
| **Author** | : | **Dr. Ramachandra Hegde Bhandimane.** |
| Paperback | : | India Rs.295/- International $ 12.99 |
| e-book | : | India Rs.149/- International $2.99 |
| Publisher | : | Notion Press. Available at Amazon, Kindle and Flipkart. |
| Pages | : | 260 |

Life after retirement, a bliss or agony as we ponder, here is a book by Dr. Ramachandra Hegde, which takes us to the journey of life after retirement. The book which is about adding healthy years after retirement encompasses both physical and mental wellbeing. The key to happiness is in our hands, the author elaborates, which is possible by eating healthy, exercising regularly, meditating, engaging in philanthropy and having positive outlook. After extensive study and based on worldwide research, his narrative includes the topics like History of Retirement, Lifelong Learning, Developing Hobbies, Possessing Natural Doctors, Philanthropic activities. While mentioning, these days companies recruit people over 50 for senior and responsible posts, he quotes the finding of a massive study conducted in America (chapter 3, p.no.33) that most of the productive age in a man's life is in between 60-70 and thereby emphasizes 'Retirement from job is not retirement from work'.

He goes into detail under each heading. For example, while discussing about Natural Doctors he explains how much calories is required in day-to-day life and gives details about healthy diet. He disapproves unnecessary medication and advocates socializing. He also describes various ways in which a person may engage in philosophic activities to find peace of mind.  Living examples and inclusion of his own experience add value to the book. The book definitely motivates those who have crossed their mid age and planning for retirement and also to those who have already retired and interested in enriching their life.

The author's entire sale earning from the book will go to schools for special children.  The author holds PhD in Agricultural development and diploma in Buddhism and Vipasana. He is engaged in various philanthropic activities. He was also the former editor of Havyaka Sandesha (1996- 2004).

**- Amita Bhagwat**

# ಸಂಕ್ಷಿಪ್ತ ಸುದ್ದಿಗಳು

## ಪ್ರತಿಭಾ ರಾವ್ ಅವರ ಸಂಪ್ರಬಂಧ 'ಶತಮಾನದ ಹಾದಿಯಲ್ಲಿ ಗೋಕುಲ' ಸಮರ್ಪಣೆ

ಕನ್ನಡ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿ ಪ್ರತಿಭಾ ರಾವ್ ಅವರು ಮುಂಬೈ ವಿಶ್ವವಿದ್ಯಾಲಯಕ್ಕೆ ಬರೆದು ಸಲ್ಲಿಸಿದ ಬಿ.ಎಸ್.ಕೆ.ಬಿ. ಅಸೋಸಿಯೇಶನ್ ಸಾಗಿ ಬಂದ ಇತಿಹಾಸವನ್ನು ಸಾರುವ 'ಶತಮಾನದ ಹಾದಿಯಲ್ಲಿ ಗೋಕುಲ' ಸಂಪ್ರಬಂಧದ ಪ್ರತಿಯನ್ನು ಗೋಕುಲ ಬ್ರಹ್ಮಕಲಶೋತ್ಸವದ ಶುಭ ಸಂದರ್ಭದಲ್ಲಿ ಶ್ರೀ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ ಬಿ.ಎಸ್.ಕೆ.ಬಿ. ಅಸೋಸಿಯೇಶನ್ನಿನ ಅಧ್ಯಕ್ಷರಾದ ಡಾ. ಸುರೇಶ್ ರಾವ್ ಅವರಿಗೆ ಹಸ್ತಾಂತರಿಸಲಾಯಿತು.

ಸಾಂಘಿಕ ಚಟುವಟಿಕೆಯಲ್ಲಿ ಮುಂಬೈ ಕನ್ನಡಿಗರದು ಎತ್ತಿದ ಕೈ. ಮುಂಬೈಯಲ್ಲಿ ನೆಲೆಸಿರುವ ಕನ್ನಡಿಗರ ಸಾಧನೆಯನ್ನು ಸಮಗ್ರವಾಗಿ ದಾಖಲಿಸುವ ಪ್ರಯತ್ನ ಕನ್ನಡ ವಿಭಾಗದ ಮೂಲಕ ನಡೆಯುತ್ತಾ ಬಂದಿದೆ. ಬಿ.ಎಸ್.ಕೆ.ಬಿ.ಎ. ಈಗ ಶತಮಾನದ ಹೊಸ್ತಿಲಲ್ಲಿ ಇದ್ದು ಪ್ರತಿಭಾ ರಾವ್ ಅವರು ಈ ಸಂಸ್ಥೆಯ ಕಾಲಕಾಲದ ಬೆಳವಣಿಗೆಯನ್ನು ಯಥಾವತ್ತಾಗಿ ದಾಖಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದು ಕೃತಿ ರೂಪದಲ್ಲಿ ಬರಲಿ ಎಂದು ಈ ಸಂದರ್ಭದಲ್ಲಿ ಸಂಪ್ರಬಂಧದ ಮಾರ್ಗದರ್ಶಕರು ಹಾಗೂ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರು ಶುಭ ಹಾರೈಸಿದರು. ಗೋಕುಲದ ನವನಿರ್ಮಾಣದ ರೂವಾರಿ ಡಾ. ಸುರೇಶ್ ರಾವ್ ಅವರನ್ನು ಈ ಸಂದರ್ಭದಲ್ಲಿ ಶಾಲು ಹೊದಿಸಿ ಗೌರವಿಸಲಾಯಿತು.

## Achievements



**Shri Venkatraman Gajanan Upadhyay,** S/o Shri G. V. Upadhyay Teppa, Kumta has received a National award 2019 by the Technology Development Board of the Department of Science and Technology, Government of India for Successful Development and commercialisation of Indigenous Technology for production of Benzene lean Gasoline by recovery of high purity Benzene from Gasoline through M/s. Reliance Industries Limited.

*PAGE DONATED BY :* ***SMT. SHANTA V. HEGDE, CARMICHAEL ROAD***

*'Havyaka Sandesha' June 2022*

***RNI NO. MAHBIL / 2000 / 746,***
***Postal R.NO. MCN/161/2021-2023***
***WPP License No. MR / Tech / WPP-130 / North / 2021-2023***
***'Licence to post without prepayment'***

| ***Posted at Mumbai Patrika Channel Stg. Office Mumbai - 400 001*** <br> **Date of Publication : 1st of every month**    **REGISTERED NEWSPAPER** | **Date of Posting :** <br> **2nd, 3rd of every month** |
|---|---|
| ***If undelivered, please return to :*** <br> **HAVYAKA WELFARE TRUST** <br> B-207, Valmiki Apts., Near Pharmacy College, <br> Sundar Nagar, Kalina, Vidyanagari P. O., <br> Mumbai - 400 098. ✆ 2665 2591 <br> **E-mail : havyakamumbai@hotmail.com** <br> **Visit : www.havyakamumbai.com** <br><br> Published by Narayan Akadas R. <br> for Havyaka Welfare Trust, Mumbai - 400 098. <br> being printed at M/s. Navin Printers, Mumbai - 400 016. <br> Hon. Editor : **Smt. Amita S. Bhagwat** | **To,** |




**Kumar Kartik** S/o. Smt. Ramya & Shri Shrinivas Bhat, Kadekodi, secured first rank by scoring 100% (625/625) in SSLC Exam of Karnataka State Board held in April 2022. Kumta Havyaka group has felicitated him on his marvelous success.



**Kumari Dravya** D/O-Smt. Renuka & Shri Nobin Hegde, Holanagadde scored 98.40% SSLC Exam of Karnataka State Board held in April 2022. With great determination, hard work and proper guidance from her Teachers and Parents she could achieve this.


Contact
**CM JOSHI,** Director
Mobile : 8879590011
**OWNER THE RISING STARS EVENT MANAGEMENT**

